ಅಧ್ಯಕ್ಷರು : ಈಗ ಈ ಚರ್ಚೆಗೆ ಅವಕಾಶ ಕೊಡುವುದಿಲ್ಲ. ವಿರೋಧ ಪಕ್ಷದ ನಾಯಕರು ಎಲ್ಲರೂ ಸಹಕರಿಸಬೇಕು. ಪದೇ ಪದೇ ನೀವು ಅದೇ ವಿಚಾರ ಪ್ರಸ್ತಾಪಿಸಿದರೆ ಉಳಿದ ವಿಚಾರ ಚರ್ಚೆ ಮಾಡುವುದು ಯಾವಾಗ?

(ಈ ಹಂತದಲ್ಲಿ ಜೆಡಿ(ಎಸ್) ಪಕ್ಷದ ಶಾಸಕರು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು: ಈ ಸದನ ನಡೆಸುವುದಕ್ಕೆ ನೀವು ಅಸಹಕಾರ ಕೋಡುತ್ತಿದ್ದೀರಿ. ಇದು ಒಳ್ಳೆಯದಲ್ಲ. ನೋಡಿ ಇನ್ನು ಚರ್ಚೆ ಮಾಡುವಂಥ ವಿಷಯಗಳು ಸಾಕಷ್ಟು ಇವೆ. ನೀವು ಏನು ಹೇಳಬೇಕೋ ಎಲ್ಲಾ ವಿಷಯ ಹೇಳಿದಿರಿ. ಎಲ್ಲಾ ವಿಷಯವನ್ನು ಮಂಡಿಸುವುದಕ್ಕೆ ನಿಮಗೆ ಅವಕಾಶ ಕೊಟ್ಟಿದ್ದೇನೆ. ಎಲ್ಲಾ ಫ್ಯಾಕ್ಟ್ಸ್ ಹೇಳಿದಿರಿ, ಸರ್ಕಾರ ಉತ್ತರ ಕೊಟ್ಟಿದೆ. ಆ ಉತ್ತರ ಸರಿನೋ ತಪ್ಪೋ ಎನ್ನುವುದು ಅವರ ವಿವೇಚನೆಗೆ ಬಿಟ್ಟಿರಕ್ಕಂಥದ್ದು. ಆದ್ದರಿಂದ ಸರ್ಕಾರ ಹೀಗೆ ಉತ್ತರ ಕೊಡಬೇಕು, ಹೀಗೆ ಆಗಬೇಕೆನ್ನುವುದಾದರೆ ನಿರ್ದಿಷ್ಟವಾಗಿ ಯಾವುದೇ ವಿಷಯವನ್ನು ಅಂತಿಮಘಟ್ಟಕ್ಕೆ ಮುಟ್ಟಿಸುವುದಕ್ಕೆ ಆಗುವುದಿಲ್ಲ. ಸದನದ ಸಮಯ ವ್ಯರ್ಥವಾಗುತ್ತದೆ. ಇವತ್ತು ಬಜೆಟ್ ಮೇಲೆ ಚರ್ಚಿಸುವುದಕ್ಕೆ ಸಾಧ್ಯವಿದೆ. ಆದರೆ ಅದರ ಬಗ್ಗೆ ಚರ್ಚೆ ಮಾಡಲೂ ಇನ್ನು ಯಾರು ತಯಾರಿಲ್ಲ. ಬಿಲ್ ಬಗ್ಗೆ ಚರ್ಚೆಯಾಗಿಲ್ಲ ಮತ್ತು ಪಾಸ್ ಆಗಿಲ್ಲ. ಕಾನೂನು ಮಾಡುವುದಕ್ಕೆ ನಾವು ಈ ಸದನಕ್ಕೆ ಬರುತ್ತೇವೆ. ಆದ್ದರಿಂದ ಈ ರೀತಿ ಮಾಡುವುದು ಸರಿಯಲ್ಲ. ಅದಕ್ಕಾಗಿ ನಾನು ನಿಮ್ಮಲ್ಲಿ ವಿನಂತಿಸುವುದೇನೆಂದರೆ, ನೀವು ನಿಮ್ಮ ಸ್ಥಳಕ್ಕೆ ಹೋಗಿ ಮುಂದೆ ಪ್ರಶ್ನೋತ್ತರ ಪ್ರಾರಂಭಿಸೋಣ. ಸಾಕಷ್ಟು ಸದಸ್ಯರು ಪ್ರಶ್ನೋತ್ತರವೇಳೆಯಲ್ಲಿ ಭಾಗವಹಿಸುವವರು ಇದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಇದು 400 ಕೋಟಿ ರೂಪಾಯಿಗಳ ಹಗರಣ ಇದೆ.

ಅಧ್ಯಕ್ಷರು: ನಿನ್ನೆ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಇಡೀ ದಿವಸ ಕೇವಲ ಇದೇ ವಿಷಯದ ಮೇಲೆ ಚರ್ಚೆಯಾಗಿದೆ. ಈ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಸಾಕಷ್ಟು ವಿಷಯ ಬಂದಿದೆ. ಬೇರೆ ಯಾವ ವಿಷಯಗಳು ಬಂದಿಲ್ಲ. ನಿನ್ನೆ ದಿವಸ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಮತ್ತು ಇವತ್ತೂ ಕೂಡ ಅವಕಾಶ ಕೊಡಿ

ಎಂದರೆ ಏನು ಅರ್ಥ? ಇದು ಸರಿಯಲ್ಲ ದಯವಿಟ್ಟು ನಿಮ್ಮ ಸ್ಥಳಗಳಿಗೆ ಹೋಗಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಇದು 400 ಕೋಟಿ ರೂಪಾಯಿಗಳ ಹಗರಣ ಇದೆ. ಇಡೀ ದಿವಸ ಇದರ ಬಗ್ಗೆ ಚರ್ಚೆಯಾಗಿದೆ.

ಅಧ್ಯಕ್ಷರು: ಪ್ರಶ್ನೋತ್ತರ ಆದ ಮೇಲೆ ಇಡೀ ದಿವಸ ಇದೇ ವಿಷಯದ ಮೇಲೆ ಚರ್ಚೆಯಾಗಿದೆ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಮಾತನಾಡುವುದಕ್ಕೆ ನಮಗೂ ಅವಕಾಶ ಕೊಡಿ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನಿನ್ನೆ ಕೊಟ್ಟ ಉತ್ತರ ಸರಿಯಿಲ್ಲ.

ಅಧ್ಯಕ್ಷರು: ಉತ್ತರ ಸರಿಯಲ್ಲ ಎಂದರೆ ಹೇಗೆ? ಉತ್ತರ ಸರಿ ಇದೆಯೋ ತಪ್ಪು ಇದೆಯೋ ಎನ್ನುವುದು ಅವರ ವಿವೇಚನೆಗೆ ಬಿಟ್ಟಿರುವುದು. ಹೀಗೆ ಉತ್ತರ ಹೇಳಿ ಎಂದು ಏನಾದರೂ ಮಾಡುವುದಕ್ಕೆ ಆಗುತ್ತದೆಯೆ? ಅವರು ಉತ್ತರಿಸಿದ್ದಾರೆ, ಸರಿಯಲ್ಲ ಎಂದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ: ಇಡೀ ದಿವಸ ಆ ವಿಚಾರದ ಬಗ್ಗೆ ಚರ್ಚೆಯಾದಾಗ ಅದರಲ್ಲಿ ಅವ್ಯವಹಾರ ಆಗಿರುವಂಥ ಸಂದರ್ಭದಲ್ಲಿ ಈ ವಿಚಾರವನ್ನು

(ಗೊಂದಲ)

ಸರ್ಕಾರ ಕೊಟ್ಟಿರುವ ಉತ್ತರ ಅದು ಉತ್ತರವೆ? ಕೇವಲ ಪ್ರಸ್ತಾವಿಕವಾಗಿರುವ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿ ಅದು ಸರ್ಕಾರದ ಅಧಿಕೃತ ಹೇಳಿಕೆ ಎನ್ನುವುದಾದರೆ, ಅದು ಕಷ್ಟವಾಗುತ್ತದೆ. ಇನ್ನೊಂದು ವಿಚಾರ ಹೇಳುವುದಾದರೆ, ಅಡಿಷನಲ್ ಚೀಫ್ ಸೆಕೆಟರಿ ಮುಖೇನ ತನಿಖೆ ಮಾಡಿಸುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಿಂದೆ ಹೌಸಿಂಗ್ ಬೋರ್ಡ್‌ನಲ್ಲಿ ಅವ್ಯವಹಾರ ಆಗಿದ್ದಂಥ ಸಂದರ್ಭದಲ್ಲಿ..

ಅಧ್ಯಕ್ಷರು: ಈ ವಿಷಯದ ಬಗ್ಗೆ ಮತ್ತೆ ಚರ್ಚೆ ಮಾಡುವುದಕ್ಕೆ ನಾನು ತಯಾರಿಲ್ಲ. ಬೇಡ. ದಯವಿಟ್ಟು ತಾವು ತಮ್ಮ ಸ್ಥಳಕ್ಕೆ ಹೋಗಿ, ಮತ್ತೆ ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ನಾನು ತಯಾರಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಹೌಸಿಂಗ್ ಬೋರ್ಡ್‌ನಲ್ಲಿ ನಡೆದ ಅವ್ಯವಹಾರದ ಬಗ್ಗೆ ತನಿಖೆ ಮಾಡಲು ಹಿಂದೆ ವಿಶ್ವನಾಥ್ ನೇತೃತ್ವದ ಕಮಿಟಿ ರಚನೆಯಾಗಿತ್ತು. ಇದರ ಬಗ್ಗೆ ಇವತ್ತಿನವರೆಗೆ ಏನು ತೀರ್ಮಾನವಾಗಿದೆ? ಈ ರೀತಿಯ ಹೇಳಿಕೆ ಕೊಡುವುದರಿಂದ ಖಂಡಿತ ಸಮಸ್ಯೆ ಬಗೆಹರಿಯುವುದಿಲ್ಲ. ಹೌಸಿಂಗ್ ಬೋರ್ಡ್‌ನ ಕಾರ್ಯಚಟುವಟಿಕೆಗಳೆಲ್ಲವೂ ಸಹಿತ ಇದರಿಂದಾಗಿ ಸ್ಥಗಿತವಾಗುತ್ತದೆ. ಒಂದು ಮುಖ್ಯವಾದ ವಿಚಾರ ಎಂದರೆ, ಇಲ್ಲಿ ಪ್ರಸ್ತಾಪವಾಗಿರುವುದು ಶಿಡ್ಲಘಟಕ್ಕೆ ಸೀಮಿತವಾಗಿರುವ ವಿಚಾರ. ಒಂದು ಎಕರೆಗೆ 50 ಲಕ್ಷದಂತೆ 959 ಎಕರೆ ಜಮೀನು ಖರೀದಿಸಲು ಇವರು ಯಾವ ಆಧಾರದ ಮೇಲೆ ನಿರ್ಣಯ ತೆಗೆದುಕೊಂಡರು? ಈ ರೀತಿಯ ನಿರ್ಣಯ ತೆಗೆದುಕೊಳ್ಳಬೇಕಾದಾಗ ಮಂತ್ರಿಯಾದಂಥವರು..

ಅಧ್ಯಕ್ಷರು: ಈಗಾಗಲೇ ಸದರಿ ವಿಷಯದ ಬಗ್ಗೆ ತಾವು ಹೇಳಿದಿರಿ. ಮತ್ತೆ ವಿರೋಧ ಪಕ್ಷದ ನಾಯಕರು, ಮಾನ್ಯ ಬಾಲಕೃಷ್ಣರವರು, ಮಾನ್ಯ ರೇವಣ್ಣನವರು ಪ್ರಸ್ತಾಪಿಸಿದ್ದಾರೆ. ಮತ್ತೆ ಅದೇ ವಿಷಯ ಪ್ರಸ್ತಾಪಿಸಿದರೆ ಏನು ಅರ್ಥ? ಅವಕಾಶ ಕೊಟ್ಟರೆ ಮತ್ತೆ ಅದೇ ರೀತಿ ಶುರುವಾಗುತ್ತದೆ. ಇದಕ್ಕೇನು ಅರ್ಥವಿದೆ?

ಶ್ರೀ ಟಿ.ಬಿ. ಜಯಚಂದ್ರ: ಇದಕ್ಕೇನಾದರೂ ಪರಿಹಾರ ಸಿಗಬೇಕಲ್ಲವೆ?

ಅಧ್ಯಕ್ಷರು: ಇದು ಸರಿಯೋ ತಪ್ಪೋ ಎನ್ನುವುದು ಅವರ ವಿವೇಚನೆಗೆ ಬಿಟ್ಟಿರುವುದು.

ಶ್ರೀ ಟಿ.ಬಿ. ಜಯಚಂದ್ರ: ಈ ರೀತಿಯಾಗಿ ಅವರನ್ನು ಬಾವಿಗೆ ಬರೆಸಿಕೊಂಡರೆ ಹೇಗೆ? ಇದಕ್ಕೆ ನಾವು ಏನಾದರೂ ಪರಿಹಾರ ಕಂಡು ಹಿಡಿಯಬೇಕಲ್ಲವೆ? ಈಗಾಗಲೇ ವಿಶ್ವನಾಥ ಕಮಿಟಿ ವರದಿ ಏನಾಯಿತು ನೋಡಿ, ಏಕೆಂದರೆ, ಹೌಸಿಂಗ್ ಬೋರ್ಡಿನಲ್ಲಿ ಕೆಲಸ ಸ್ಥಗಿತವಾಗಬಾರದು. ಇಲ್ಲಿ ಏನಾಗಿದೆ

ಎಂದರೆ, ಕೇವಲ ಕೆಲವೇ ತಿಂಗಳಲ್ಲಿ ಇದರ ಪ್ರಸ್ತಾವನೆ ಯಾವುದೇ ಸಮೀಕ್ಷೆ ಇಲ್ಲದೇ ಪ್ರಾರಂಭವಾಗಿ, ಆರು ತಿಂಗಳೊಳಗಾಗಿ ಮಂತ್ರಿಗಳ ಮೂಗಿನ ಕೆಳಗೆ ಇದು ನಡೆದಿರುವುದರಿಂದ ಅವರು ಭಾಗಿಯಾಗಿರುವ ಸಂದರ್ಭದಲ್ಲಿ ಮತ್ತು ಅವರ ಕಡೆಯವರ ಹಸ್ತಕ್ಷೇಪದಿಂದ ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿ ಲೂಟಿಯಾಗಿರುವ ವಿಚಾರದಲ್ಲಿ ಸರ್ಕಾರ ಕೊಟ್ಟಿರುವ ಹೇಳಿಕೆ ಒಂದು ಹೇಳಿಕೆಯೇ ಎಂಬುದರ ಬಗ್ಗೆ ತಾವು ಯೋಚನೆ ಮಾಡಬೇಕು.

ಅಧ್ಯಕ್ಷರು: ಸರ್ಕಾರದವರು ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ: ಇಡೀ ದಿವಸ ಇದರ ಬಗ್ಗೆ ಚರ್ಚೆಯಾಗಿ ಅದರ ಮೇಲೆ ಸರ್ಕಾರ ಅಧಿಕೃತವಾಗಿ ಕೊಟ್ಟಿರುವ ಹೇಳಿಕೆ ಇದು ಒಂದು ಹೇಳಿಕೆಯೆ? ಇದರಿಂದ ಸಮಸ್ಯೆ ಬಗೆಹರಿಯುತ್ತದೆಯೆ ತಾವೇ ಯೋಚಿಸಿ.

ಶ್ರೀ ಎಸ್. ಸುರೇಶ್ ಕುಮಾರ್: ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ಈ ರೀತಿಯಾದರೆ ಸಮಸ್ಯೆ ಬಗೆಹರಿಯುತ್ತದೆಯೆ?

ಶ್ರೀ ಟಿ.ಬಿ. ಜಯಚಂದ್ರ: ಇವತ್ತು ಜೆಡಿಎಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಕುಳಿತಿದ್ದಾರೆ. ತಾವು ಈ ರೀತಿಯಾಗಿ ಮಾಡುವುದರಿಂದ ಸಭೆ ಹೇಗೆ ನಡೆಯುತ್ತದೆ? ದಯಮಾಡಿ ಇದರ ಬಗ್ಗೆ ಅರ್ಥ ಮಾಡಿಕೊಳ್ಳಿ..

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ ಹೌಸಿಂಗ್ ಬೋರ್ಡಿನ ವಿಚಾರದ ಬಗ್ಗೆ ಮತ್ತೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಟ್ಟಿಲ್ಲ. ಈ ವಿಷಯವನ್ನು ನಾನು ಈಗಾಗಲೇ ಮುಕ್ತಾಯಗೊಳಿಸಿದ್ದೇನೆ. ದಯವಿಟ್ಟು ಸಹಕರಿಸಿ, ಪ್ರಶ್ನೋತ್ತರ ವೇಳೆ ನಡೆಸುವುದಕ್ಕೆ ಅವಕಾಶ ಕೊಡಿ. ಸದನ ನಡೆಸುವುದು ಬೇಡ ಎನ್ನುವುದಾದರೆ ನಾನು ಅಡ್ಜರ್ನ್ ಮಾಡಿ ಹೋಗುತ್ತೇನೆ. ಬೇಡ ಎಂದರೆ ಬಿಟ್ಟು ಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ಈ ರೀತಿ ಹೇಳಿದರೆ ಕಷ್ಟ.

ಅಧ್ಯಕ್ಷರು: ಈಗಾಗಲೇ ಈ ವಿಷಯ ಮುಕ್ತಾವಾಗಿದೆ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ಇದಕ್ಕೆ ಏನು ಪರಿಹಾರ ಹೇಳಿ?

ಅಧ್ಯಕ್ಷರು: ಸಬ್ಜೆಕ್ಟ್ ಕ್ಲೋಸ್ ಮಾಡಿರುವುದರ ಬಗ್ಗೆ ಸಭಾಧ್ಯಕ್ಷರು ಒಂದು ತೀರ್ಮ ಕೊಟ್ಟಿದ್ದಾರೆ. ಕ್ಲೋಸ್ ಆಗಿದೆ ಎಂದು ತೀರ್ಮ ಕೊಟ್ಟ ಮೇಲೆ ಮತ್ತೆ ಆ ವಿಷಯವನ್ನು ಹೇಳುವುದು ಸರಿಯಲ್ಲ.

ಶ್ರೀ ಸಿದ್ದರಾಮಯ್ಯ: 15 ಕೋಟಿ ರೂಪಾಯಿಯ ಚೆಕ್ ಕೊಟ್ಟಿರುವುದು is it not a fact? This is an admitted fact, ಇದನ್ನು ಕೂಡ ಪ್ರೂವ್ ಮಾಡಬೇಕೆ? 15 ಕೋಟಿ ರೂಪಾಯಿಯ ಚೆಕ್‌ಗಳನ್ನು ಕೊಟ್ಟಿದ್ದೇವೆ, 31 ಎಕರೆ ಖರೀದಿಯಾಗಿದೆ, 5 ಲಕ್ಷ ರೂಪಾಯಿಗೆ ಇರುವುದನ್ನು ಕೊಂಡುಕೊಂಡು 50 ಲಕ್ಷ ಕೊಟ್ಟಿದ್ದೇವೆ, ಈ ವಿಷಯ ಗೊತ್ತಾದ ತಕ್ಷಣ ನಿಲ್ಲಿಸಿದ್ದೀರಿ, ಇದನ್ನು ಯಾವತ್ತು ನಿಲ್ಲಿಸಿದ್ದೀರಿ ಎಂದರೆ, ಮಾನ್ಯ ಸೋಮಣ್ಣನವರು 10 ನೇ ತಾರೀಖು ಅಲ್ಲಿ ಉತ್ತರ ಕೊಟ್ಟ ಮೇಲೆ ನಿನ್ನೆ ಇವರು ಇಲ್ಲಿ ನಿಲ್ಲಿಸಿದ್ದೇವೆಂದು ಹೇಳಿದರು. 10ನೇ ತಾರಿಖಿನವರೆವಿಗೂ ವಿಧಾನ ಪರಿಷತ್ತಿನಲ್ಲಿ ನಿಲ್ಲಿಸಿದ್ದೇವೆಂದು ಮಾನ್ಯ ಸೋಮಣ್ಣನವರು ಹೇಳಿರಲಿಲ್ಲ. ಆವತ್ತು ಏನು ಪ್ರಸ್ತಾಪ ಆಗಿರಲಿಲ್ಲ ಮತ್ತು ಅವರ ಗಮನಕ್ಕೆ ಬಂದಿರಲಿಲ್ಲ. ಈ ರೀತಿಯಾಗಿ ಸುಮಾರು 400 ಕೋಟಿ ರೂಪಾಯಿ ಖರ್ಚು ಮಾಡಿ 959 ಎಕರೆ ಖರೀದಿ ಮಾಡತಕ್ಕಂಥ ವಿಷಯ ಕ್ಯಾಬಿನೆಟ್‌ಗೆ ಬರುವುದಿಲ್ಲವೆಂದು ಹೇಳುತ್ತಾರೆ. ಅದರ ಪ್ರಾಜೆಕ್ಟ್ ಕಾಸ್ಟ್ ಮತ್ತಿತರ ವಿವರಗಳು ಕ್ಯಾಬಿನೆಟ್‌ಗೆ ಬರುವುದಿಲ್ಲವೆ?

ಶ್ರೀ ಸಿದ್ದರಾಮಯ್ಯ: (ಮುಂದು)

ಅದೆಲ್ಲಾ ಕ್ಯಾಬಿನೆಟ್‌ಗೆ ಬರಬೇಕಾಗುತ್ತದಲ್ಲವೆ? Why are you misleading the House?

(ಗೊಂದಲ)

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೆ, ನೆನ್ನೆ ದಿವಸ ಈ ಎಲ್ಲಾ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹಾಗಾದರೆ, 15 ಕೋಟಿ ಕೊಟ್ಟಿರುವವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿದ್ದಾರೆಯೇ? ಮಾಡಿಲ್ಲ.

ಅಧ್ಯಕ್ಷರು: ಅಸೆಂಬ್ಲಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಮತ್ತೆ ಅದೇ ವಿಷಯವನ್ನು ಇವತ್ತು ಪ್ರಸ್ತಾಪ ಮಾಡಿದರೆ ಏನರ್ಥ?

ಶ್ರೀ ಸಿದ್ದರಾಮಯ್ಯ: ಹಾಗಾದರೆ, ಈ ವಿಷಯ ಬಿಟ್ಟು ಹೋಗೋಣವೇ? That is why, we demand ಈ ಹಗರಣಕ್ಕೆ ಸಂಬಂಧಪಟ್ಟವರನ್ನು ಮೊದಲು suspend ಮಾಡಿ. CBI enquiryಗೆ ಆದೇಶ ಮಾಡಬೇಕು.

(ಗೊಂದಲ)

ಅಧ್ಯಕ್ಷರು: ಈಗಾಗಲೇ ಎಲ್ಲಾ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಯಾವ್ಯಾವ ವಿಷಯಕ್ಕೆ ಉತ್ತರ ಕೊಟ್ಟಿಲ್ಲವೋ, ಅದರ ಬಗ್ಗೆ ರಾಜಕೀಯವಾಗಿ ಪ್ರಸ್ತಾಪ ಮಾಡುವುದಕ್ಕೆ ಬೇರೆ ದಾರಿಗಳಿವೆ.

ಶ್ರೀ ಸಿದ್ದರಾಮಯ್ಯ: ಇದರಲ್ಲಿ ಮಾಜಿ ಮಂತ್ರಿಗಳು ಅಥವಾ ಅಲ್ಲಿನ ಛೇರ್ಮನ್‌ರವರು ಅಥವಾ ಅಧಿಕಾರಿಗಳಿರಬಹುದು. ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಿ. ಏನು ಕ್ರಮ ತೆಗೆದುಕೊಳ್ಳದೆ ಇದ್ದರೆ ನಾವು ಸುಮ್ಮನೆ ಇರುವುದಕ್ಕೆ ಆಗುತ್ತದೆಯೇ?

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಸಹಕಾರ ಕೊಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಒಂದು ಎಕರೆಗೆ 50 ಲಕ್ಷಗಳಂತೆ ಒಂದು ಸಾವಿರ ಎಕರೆ ಭೂಮಿಯನ್ನು ಖರೀದಿ ಮಾಡಲು ಸರ್ಕಾರ ಅನುಮತಿ ನೀಡಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ನೆನ್ನೆ ದಿವಸ ಈ ಎಲ್ಲಾ ವಿಷಯವನ್ನು ಹೇಳಿದ್ದೀರಿ. ನೆನ್ನೆ ದಿವಸ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇದೇ ವಿಷಯದ ಬಗ್ಗೆ ಚರ್ಚೆ ಮಾಡಲಾಗಿದೆ. ಮತ್ತೆ ಅದೇ ವಿಷಯವನ್ನು ಪದೇ ಪದೇ ಹೇಳುವುದು ಬೇಡ. ಈಗ ಬೇರೆ ವಿಷಯವನ್ನು ತೆಗೆದುಕೊಳ್ಳೋಣ. ಪದೇ ಪದೇ ಅದೇ ವಿಷಯದ ಬಗ್ಗೆ ಮಾತನಾಡುವುದಾದರೆ I will not allow.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ನಮಗೆ ನ್ಯಾಯ ಕೊಡಿಸಬೇಕು. ಇಲ್ಲದಿದ್ದರೆ ನಾವೂ ಕೂಡ ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಧರಣಿ ಮಾಡಲು ಬಂದರು)

ಅಧ್ಯಕ್ಷರು: ನಾನು ಈಗಾಗಲೇ ಆ ವಿಷಯವನ್ನು ಮುಕ್ತಾಯಗೊಳಿಸಿದ್ದೇನೆ.

(ಈ ಹಂತದಲ್ಲಿ ಜಾತ್ಯಾತೀತ ಜನತಾದಳದ ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು: ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುವ ಸದಸ್ಯರ ಹೇಳಿಕೆ ಕಡತಕ್ಕೆ ಹೋಗಬಾರದು.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ನಿಮ್ಮ ಸ್ಥಳಗಳಿಗೆ ಹೋಗಿ ಮುಂದಿನ ಪ್ರೊಸಿಡಿಂಗ್ಸ್ ನಡೆಸುವುದಕ್ಕೆ ಸಹಕಾರ ಕೊಡಿ. ಈ ರೀತಿಯಾಗಿ ಮಾಡುವುದು ಸರಿಯಲ್ಲ. ಇನ್ನು ಬಹಳಷ್ಟು ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಹಾಗೆಯೇ ಬೇಕಾದಷ್ಟು ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕು. ದಯವಿಟ್ಟು ನಿಮ್ಮಗಳ ಸ್ಥಾನಕ್ಕೆ ಹೋಗಿ ಎಂದು ನಾನು ರಿಕ್ವೆಸ್ಟ್

ಮಾಡುತ್ತೇನೆ. I am requesting you to please allow me to continue the proceedings. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ... ಈಗ ನಾನು ಸದನವನ್ನು 15 ನಿಮಿಷ ಮುಂದೂಡಿದ್ದೇನೆ.

(ಸದನವು ಬೆಳಿಗ್ಗೆ 11 ಗಂಟೆ 23 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತೆ 15 ನಿಮಿಷಗಳ ನಂತರ ಸೇರಲು ನಿರ್ಣಯಿಸಿತು)

(ಸದನವು ಮಧ್ಯಾಹ್ನ 1.29ಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

(ಸದನ ಸಮಾವೇಶಗೊಂಡಾಗ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸಿದ್ದರು ಮತ್ತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು: ಮಾನ್ಯ ಸದಸ್ಯರು ದಯವಿಟ್ಟು ತಮ್ಮತಮ್ಮ ಸ್ಥಾನಗಳಿಗೆ ಹೋಗಿ, ಸದನದ ಕಲಾಪಗಳನ್ನು ನಡೆಸೋಣ. ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ. Question hour, ಬಜೆಟ್, ಬಿಲ್‌ಗಳ ಮೇಲೆ ಚರ್ಚೆ ಮಾಡೋಣ. ದಯವಿಟ್ಟು, ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. (ಗೊಂದಲ) Well ನಲ್ಲಿ ಮಾತನಾಡುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ. (ಗೊಂದಲ) ದಯವಿಟ್ಟು, ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಪ್ರಕಟಣೆ

ಅಧ್ಯಕ್ಷರು: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಸಚಿವರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿರವರು ಈ ದಿನ ಮಧ್ಯಾಹ್ನ ಮಾನ್ಯ ಸಚಿವರುಗಳು ಹಾಗೂ ಶಾಸಕರ ಗೌರವಾರ್ಥ ವಿಧಾನಸೌಧದ Banquet Hall ನಲ್ಲಿ ಔತಣ

ಕೂಟವನ್ನೇರ್ಪಡಿಸಿದ್ದಾರೆ. ದಯವಿಟ್ಟು, ಆ ಭೋಜನಕೂಟದಲ್ಲಿ ಎಲ್ಲರೂ ಭಾಗವಹಿಸಬೇಕೆಂದು ಕೋರಿದ್ದಾರೆ.

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಮುಂದೂಡಿ ಪುನ: ಮಧ್ಯಾಹ್ನ 3–00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 1–31 ಗಂಟೆಗೆ ಮುಕ್ತಾಯಗೊಂಡು ಪುನ: ಮಧ್ಯಾಹ್ನ 3–00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)

(ಸದನವು ಪುನ: ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಸದನವು ಪುನ: ಪ್ರಾರಂಭವಾದಾಗ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ಜಾತ್ಯಾತೀತ ಜನತಾದಳದ ಸದಸ್ಯರು ಸದನ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಅಧ್ಯಕ್ಷರು: ಸದನ ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಅವಕಾಶ ಇಲ್ಲ. ಬಾವಿಗೆ ಬಂದರೆ ಮಾತನಾಡುವ ಹಕ್ಕನ್ನು ಕಳೆದುಕೊಳ್ಳುತ್ತೀರಿ.

ಶ್ರೀ ಸಿದ್ದರಾಮಯ್ಯ (ವಿರೋಧಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಇಷ್ಟೊಂದು ಮೊಂಡತನ ಪ್ರದರ್ಶನ ಮಾಡತಕ್ಕಂಥದ್ದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಿಯಾದಂಥದ್ದಲ್ಲ. ನೂರಾರು ಕೋಟಿ ರೂಪಾಯಿಗಳ ಹಗರಣಕ್ಕೆ ಸಂಬಂಧಪಟ್ಟಂಥ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಇಷ್ಟೊಂದು ಭ್ರಷ್ಟಾಚಾರವಾಗಿರುವ ಬಗ್ಗೆ ಗಂಭೀರವಾದಂಥ ಆರೋಪ ಮಾಡಿದ್ದೇವೆ. ಈ ರೀತಿಯಾಗಿದ್ದರೂ ಕೂಡ ಅವರು ಮೊಂಡತನದಿಂದ ನಾವು ಹೇಳುವುದು ಮತ್ತು ನಡೆದುಕೊಳ್ಳುವುದೇ ಸರಿ ಹಾಗೂ ನಮ್ಮ ತೀರ್ಮಾನ ಕೂಡ ಸರಿ ಎನ್ನುವುದಾದರೆ ರಾಜ್ಯದ ಜನರು ಹೊರಗಡೆ ನಮ್ಮನ್ನೆಲ್ಲಾ ನೋಡುತ್ತಿದ್ದಾರೆ. ನಾವು ಬಹಳ ಸ್ಪಷ್ಟವಾದ ದಾಖಲಾತಿಗಳ ಮೂಲಕ ಹೇಳಿದ್ದೇವೆ. ಕೇವಲ ಅಲಿಗೇಷನ್ ಮಾಡಿದ್ದರೆ ಅರ್ಥಮಾಡಿಕೊಳ್ಳಬಹುದು.

ದಾಖಲಾತಿಗಳಿಲ್ಲದೇ ಆರೋಪ ಮಾಡಿದ್ದರೆ ಅಥವಾ ದುರುದ್ದೇಶದಿಂದ ಮಾಡಿರುವ ಆರೋಪವಾಗಿದ್ದರೆ ಅಥವಾ ವಿರೋಧಪಕ್ಷದಲ್ಲಿರುವ ಉದ್ದೇಶದಿಂದ ಆರೋಪ ಮಾಡಿದ್ದೇವೆ ಎನ್ನುವುದಾದರೆ ಅದನ್ನು ನೀವೂ ಕೂಡ ತಳ್ಳಿ ಹಾಕಬಹುದು. ಆದರೆ, ಇಲ್ಲಿ ಆಧಾರ ರಹಿತವಾಗಿ ದಾಖಲಾತಿಗಳನ್ನು ಇಟ್ಟುಕೊಂಡು ಅವರು ಮಾಡಿರತಕ್ಕಂಥದ್ದು ಕಾನೂನು ಬಾಹಿರವಾಗಿದೆ ಎಂದು ಹೇಳಿದ್ದೇವೆ. ಮತ್ತೆ ಅವರು ಹೌಸಿಂಗ್ ಬೋರ್ಡ್‌ಗೆ ದೊಡ್ಡ ಮೋಸ ಮಾಡಿದ್ದಾರೆ. ಇದರಿಂದ ಹೌಸಿಂಗ್ ಬೋರ್ಡ್‌ಗೆ ನಷ್ಟವಾಗುತ್ತಿದೆ ಎಂದು ಹಾಗೂ ಹಿಂದೆ ಇದ್ದಂಥ ಮಂತ್ರಿ ಇದರಲ್ಲಿ ನೇರವಾಗಿ ಶಾಮೀಲಾಗಿದ್ದಾರೆ. ಏಕೆಂದರೆ, ಇದಕ್ಕೆ ಸರ್ಕಾರ ಅನುಮತಿ ಕೊಟ್ಟಿದೆ. ಅಂದರೆ, ಅವರೇ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಇದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಅವರ own elder brother ರವರಿಂದ ಜಮೀನು ಖರೀದಿ ಮಾಡಿದ್ದಾರೆ. ಇಲ್ಲಿ ರೈತರಿಗೆ 5 ಲಕ್ಷ ಕೊಟ್ಟು ಇವರು 50 ಲಕ್ಷ ರೂಪಾಯಿ ತೆಗೆದುಕೊಂಡಿದ್ದಾರೆ. 45 ಲಕ್ಷ ರೂಪಾಯಿ ವ್ಯತ್ಯಾಸವಿದೆ. ಈಗ 31 ಎಕರೆ ಮಾತ್ರ ಆಗಿದೆ, ಉಳಿದದ್ದನ್ನು ನಿಲ್ಲಿಸಿದ್ದೇವೆಂದು ಹೇಳುತ್ತಿದ್ದಾರೆ. ಈ 31 ಎಕರೆ ಖರೀದಿ ಮಾಡುವುದಕ್ಕೆ 15 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇದರೊಳಗೆ ರೈತರಿಗೆ ಕೇವಲ 1.5 ಕೋಟಿ ಮಾತ್ರ ಸಿಕ್ಕಿದೆ. ಇನ್ನು 13.5 ಯಿಂದ 14 ಕೋಟಿ ರೂಪಾಯಿ ಗುಳಂ ಆಗಿದೆ. 959 ಎಕರೆ ಜಮೀನು ತೆಗೆದುಕೊಳ್ಳುವುದನ್ನು ನಿಲ್ಲಿಸಿದ್ದೇವೆಂದು ಹೇಳಬಹುದು. ಆದರೆ, 14 ಕೋಟಿ ರೂಪಾಯಿಗೆ ಯಾರು ಜವಾಬ್ದಾರರು? ರೈತರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡು ರೈತರಿಗೆ ಟೋಪಿ ಹಾಕಿದ್ದಾರೆ. ಈ ರೀತಿಯಾದರೆ ಹೇಗೆ? ಅಸೆಂಬ್ಲಿ ನಡೆಯಬೇಕೆಂಬುದರ ಬಗ್ಗೆ ನಮಗೆಲ್ಲಾ ಆಸಕ್ತಿ ಇದೆ. ಏಕೆಂದರೆ, ಇದೊಂದೆ ವಿಚಾರವಲ್ಲ. ಇನ್ನು ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕು. ಗೊಬ್ಬರದ ವಿಚಾರ ಕೂಡ ಇದೆ. ನೆನ್ನೆ ಮೊನ್ನೆಯಿಂದ ಗೊಬ್ಬರದ ವಿಚಾರವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇವತ್ತೂ ನಿಯಮ 60ರ ಮೇಲೆ ಚರ್ಚೆ ಮಾಡಲು ಒಂದು ಗಂಭೀರವಾದಂಥ ವಿಚಾರ ಇತ್ತು. ಅದನ್ನೂ ಕೂಡ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇಲ್ಲಿ ಡೆಡ್‌ಲಾಕ್ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸುತ್ತಿಲ್ಲ. He is the Leader of the House. ಆದ್ದರಿಂದ, ಅವರು ಇಲ್ಲಿಗೆ ಬಂದು ಅಡ್ವೈಸ್ ಮಾಡಬೇಕಾಗಿತ್ತು. ಅಥವಾ ಸರ್ಕಾರದ ಪರವಾಗಿ

ಏನಾದರೂ ಹೇಳಬೇಕಾಗಿತ್ತು. ಹೌಸ್ ನಡೆಸಬೇಕೆಂದು ನಿಮಗೆ ಆಸಕ್ತಿ ಇದೆ. ಮತ್ತೆ ನಮಗೂ ಕೂಡ ಆಸಕ್ತಿ ಇದೆ. ಆದರೆ, ಇಲ್ಲಿ ಡೆಡ್‌ಲಾಕ್ ಆಗಿರುವುದು ಯಾರಿಂದ? ಸರ್ಕಾರ ನಡೆಸುತ್ತಿರುವವರಿಂದ ಇಲ್ಲಿ ಡೆಡ್‌ಲಾಕ್ ಆಗಿದೆ. ಅವರು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ನೋಡುತ್ತಿದ್ದಾರೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಅಂಗೈ ಹುಣ್ಣಿಗೆ ಕನ್ನಡಿ ಬೇಡ ಎನ್ನುವ ಹಾಗೆ ಕಾರ್ಯದರ್ಶಿ ಮತ್ತು ಸಂಬಂಧಪಟ್ಟಂಥ ಸಚಿವರು ಹಾಗೂ ಕಮಿಷನರ್‌ರವರು ತಪ್ಪು ಮಾಡಿರತಕ್ಕಂಥದ್ದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವರುಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವರು ಹಿಂದೇಟು ಏಕೆ ಮಾಡುತ್ತಿದ್ದಾರೆ? ಇದರ ಅರ್ಥ ಮತ್ತು ಉದ್ದೇಶ ಏನು? ನನ್ನ ಪ್ರಕಾರ ಅವರನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಹೊರಟಿದೆ. ಇವರು ತಪ್ಪಿತಸ್ಥರಿಗೆ ರಕ್ಷಣೆ ಮಾಡುವುದಾದರೆ, ನ್ಯಾಯವನ್ನು ಹೇಗೆ ಕೊಡುತ್ತಾರೆ? ನ್ಯಾಯ ಕೊಡುವುದಕ್ಕೋಸ್ಕರ ಮತ್ತು ಅನ್ಯಾಯವನ್ನು ಸರಿಪಡಿಸುವುದಕ್ಕೋಸ್ಕರವಾಗಿ ಅಧಿಕಾರದಲ್ಲಿ ಸರ್ಕಾರ ಇರುತ್ತದೆ. ನಮ್ಮ ಸರ್ಕಾರ ಪಾರದರ್ಶಕವಾಗಿದೆ ಎಂದು ಒಂದು ಕಡೆ ಹೇಳುತ್ತೀರಿ. ಇದನ್ನು ಪಾರದರ್ಶಕವೆಂದು ಕರೆಯಬೇಕೆ? ನೀವು ಪಾರದರ್ಶಕ ಎನ್ನುವುದಾದರೆ, beyond doubts ಡಾಕ್ಯುಮೆಂಟ್ಸ್ ಮೂಲಕ ಆರೋಪಗಳು prove ಆಗಿದೆ. All the documents clearly say that all these allegations are proved beyond doubts. ಇದಕ್ಕಿಂಥ ಇನ್ನೇನು ಬೇಕಾಗುತ್ತದೆ? ಪಾರದರ್ಶಕತೆ ಮತ್ತು ಪ್ರಜಾಪ್ರಭುತ್ವದಲ್ಲಿ ಅವರಿಗೆ ನಿಜವಾಗಿ ನಂಬಿಕೆ ಇದ್ದರೆ ಈ ರಾಜ್ಯದ ರೈತರ ಮತ್ತು ಜನರ ಬಗ್ಗೆ ಕಳಕಳಿ ಇದ್ದರೆ ಕೂಡಲೇ ಈ ಎಲ್ಲಾ ಘಟನೆಯನ್ನು ಸಿಬಿಐಗೆ ಒಪ್ಪಿಸಬೇಕು. ಮತ್ತೆ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಈ ಕೂಡಲೇ ಸಸ್ಪೆಂಡ್ ಮಾಡಿ ಸಿಬಿಐಗೆ ಕೊಟ್ಟರೆ ಸತ್ಯ ಹೊರಕ್ಕೆ ಬಂದು ಈ ಸತ್ಯವೆಲ್ಲ ಜನರಿಗೆಲ್ಲಾ ಗೊತ್ತಾಗಬೇಕು. ಇಲ್ಲದಿದ್ದರೆ, ಈ ರಾಜ್ಯದ ಜನತೆಗೆ ಏನು ಮೆಸೇಜ್ ಹೋಗುತ್ತದೆಂದರೆ, ಈ ಸರ್ಕಾರ ತಪ್ಪಿತಸ್ಥರನ್ನು ಮತ್ತು ಭ್ರಷ್ಟಾಚಾರ ಮಾಡಿರುವವರನ್ನು ಹಾಗೂ ಈ ರಾಜ್ಯದ ಹಣವನ್ನು ಲೂಟಿ ಹೊಡೆಯುವುದಕ್ಕೆ ಶಾಮೀಲಾಗಿರುವಂಥವರನ್ನು ಮತ್ತು ರೈತರಿಗೆ ಮೋಸಮಾಡಿರುವಂಥವರಿಗೆ ರಕ್ಷಣೆ ಕೊಡುತ್ತಾರೆಂದು ಮೆಸೆಜ್ ಹೋಗುತ್ತದೆ. ಮತ್ತೆ ಈ ಬಗ್ಗೆ ಬೇಕಾದಷ್ಟು ಊಹಾಪೋಹಗಳು ಹುಟ್ಟುಕೊಳ್ಳುತ್ತವೆ. ಆಗ ಇದರಲ್ಲಿ ಯಾರ್ಯಾರು ಇದ್ದಾರೆಂಬುದು ಸರ್ಕಾರಕ್ಕೆ

ಗೊತ್ತಾಗುವುದಿಲ್ಲ. ಆದ್ದರಿಂದ, ಇವರು ಏಕೆ ಹಿಂದೇಟು ಹಾಕುತ್ತಿದ್ದಾರೆ? ಇದರ ಬಗ್ಗೆ ನನಗೆ ಗೊತ್ತಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಏತಕ್ಕೋಸ್ಕರ ಹೇಳುತ್ತಿದ್ದಾರೆ? Why he is hesitating I want to know? ಇಂಥ ಒಂದು ಪ್ರಕರಣವನ್ನು ಅಡಿಷನಲ್ ಚೀಫ್ ಸೆಕ್ರೆಟರಿಯವರಿಂದ ತನಿಖೆ ಮಾಡಿಸಿದರೆ ಜನರು ಇದನ್ನು ನೋಡಿ ನಗುತ್ತಾರಷ್ಟೆ. ಇದರಿಂದ ಸತ್ಯ ಬರುವುದಕ್ಕೆ ಸಾಧ್ಯವೇ? ಮತ್ತೆ ನ್ಯಾಯ ಸಿಗುವುದಕ್ಕೆ ಸಾಧ್ಯವೆ? ನಾನು ಹೇಳುವುದೇನೆಂದೆ, ಮತ್ತೊಮ್ಮೆ ತಾವು ದಯಮಾಡಿ ಸರ್ಕಾರಕ್ಕೆ ಹೇಳಬೇಕು. ನೆನ್ನೆದಿವಸ ಸರ್ಕಾರ ಕೊಟ್ಟಿರುವ ಉತ್ತರ ಬಹಳ irresponsible ಆಗಿದೆ. ಜವಾಬ್ದಾರಿ ಇರತಕ್ಕಂಥ ಸರ್ಕಾರ ಕೊಡತಕ್ಕಂಥ ಉತ್ತರ ಇದಲ್ಲ. ಇದೇ ರೀತಿಯಾಗಿ ಇದನ್ನು ಮುಂದುವರಿಯುವುದಕ್ಕೆ ದಯವಿಟ್ಟು ಬಿಡಬಾರದು. ಇಬ್ಬರು ಅಧಿಕಾರಿಗಳನ್ನು ಸರ್ಕಾರ ಕೂಡಲೇ ಸಸ್ಪೆಂಡ್ ಮಾಡಿ ಸಿ.ಬಿ.ಐ. ತನಿಗೆ ಕೊಡುತ್ತೇನೆಂದು ಸರ್ಕಾರ ಹೇಳದೆ ಇದ್ದರೆ ನಮಗೆ ಬೇರೆ ಗತ್ಯಂತರ ಇಲ್ಲ. ನಾವು ಈ ಧರಣಿಯನ್ನು ಮುಂದುವರಿಸಬೇಕಾದಂಥ ಅನಿವಾರ್ಯತೆ ನಿರ್ಮಾಣವಾಗುತ್ತದೆ. ಈ ರೀತಿಯಾಗಬಾರದು ಮತ್ತೆ ಬೇರೆ ಬೇರೆ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡುವುದಕ್ಕೋಸ್ಕರ ಇದರ ಬಗ್ಗೆ ತೀರ್ಮಾನ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ): ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಈಗಾಗಲೇ ತನಿಖೆಗೆ ಒಪ್ಪಿಕೊಂಡಿದೆ. ಅಡಿಷನಲ್ ಚೀಫ್ ಸೆಕ್ರೆಟರಿಯವರ ಕಡೆಯಿಂದ ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರೆ. ಅಂದರೆ, ಎಲ್ಲೋ ಒಂದು ಕಡೆ ತಪ್ಪಾಗಿದೆ ಎಂದು ಸರ್ಕಾರ ಒಪ್ಪಕೊಂಡಿದೆ. ತನಿಖೆ ಮಾಡಿಸುತ್ತೇವೆಂದು ಒಪ್ಪಿಕೊಂಡ ಮೇಲೆ ಎಲ್ಲೋ ಒಂದು ಕಡೆ ಹಣದ ದುರುಪಯೋಗವಾಗಿದೆ ಎಂದು ಸರ್ಕಾರ ಒಪ್ಪಿಕೊಂಡ ಹಾಗೆ ಆಗಿದೆ. ತಮ್ಮ ಮೂಲಕ ಒಂದು ಮಾತನ್ನು ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅದೇನೆಂದರೆ, ಅಲ್ಲಿ ಒಂದು ಪ್ರೊಸಿಡಿಂಗ್ಸ್ ಆದ ನಂತರ ಜಿಲ್ಲಾಧಿಕಾರಿಯವನ್ನು ಬದಲಾವಣೆ ಮಾಡುತ್ತಾರೆ. ಅವರು ಈ ರೀತಿಯಾಗಿ ಮಾಡುವುದಕ್ಕೆ ಒಪ್ಪಲಿಲ್ಲವೆಂಬ ಕಾರಣಕ್ಕೋಸ್ಕರ ಈ ರೀತಿ ಮಾಡುತ್ತಾರೆ. ಅವರ ಬದಲಾವಣೆಯನ್ನು ಮಾನ್ಯ ಕೃಷ್ಣಯ್ಯ ಶೆಟ್ಟಿಯವರು ಮಾಡುವುದಕ್ಕೆ ಆಗುತ್ತದೆಯೆ? ಮಾನ್ಯ

ಮುಖ್ಯಮಂತ್ರಿಗಳು ಅವರನ್ನು ಬದಲಾವಣೆ ಮಾಡಬೇಕು. ಅಂದರೆ, ಈ ವಿಷಯ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ಬಂದಿದೆ ಎಂದು ಆಯಿತ್ತಲ್ಲವೆ? ಮತ್ತೆ ಅಡಿಷನಲ್ ಚೀಫ್ ಸೆಕ್ರೆಟರಿಯವರು ಮಾನ್ಯ ಮುಖ್ಯಮಂತ್ರಿಯವರ ಕಂಟ್ರೋಲ್‌ನಲ್ಲಿರುತ್ತಾರೆ. ಆದ್ದರಿಂದ, ಅಡಿಷನಲ್ ಚೀಫ್ ಸೆಕ್ರೆಟರಿಯವರಿಂದ ನಮಗೆ ನ್ಯಾಯ ಹೇಗೆ ಸಿಗುತ್ತದೆ? ಇದರ ಸತ್ಯಾಸತ್ಯತೆ ಹೊರಗಡೆ ಬರಬೇಕಾಗುತ್ತದೆ. ರಾಮನಗರದಲ್ಲಿ ಕೆಲಸ ಮಾಡುವುದಕ್ಕೆ ಗುತ್ತಿಗೆದಾರನಿಗೆ ಹಿಂದಿನ ಸರ್ಕಾರ ಅಡ್ವಾನ್ಸ್ ಎಂದು 30 ಕೋಟಿ ರೂಪಾಯಿ ಕೊಟ್ಟಿತು. ಇದಕ್ಕೆ ಸಂಬಂಧಪಟ್ಟಂಥ ಇಬ್ಬರು ಅಧಿಕಾರಿಗಳನ್ನು ನೀವು ಬಂದ ಮೇಲೆ ಸಸ್ಪೆಂಡ್ ಮಾಡಿ ತನಿಖೆಗೆ ಆದೇಶ ಮಾಡಿದ್ದೀರಿ. ಈಗ ನಾವು ಹೇಳುತ್ತಿರುವ ಪ್ರಕರಣದಲ್ಲಿ ಸುಮಾರು 400 ಕೋಟಿಯಷ್ಟು ಇನ್ವಾಲ್ವ್ ಆಗಿದೆ. ಮೊದಲು ಟೆಸ್ಟ್ ಮಾಡುವುದಕ್ಕೋಸ್ಕರ 30 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇದರ ಬಗ್ಗೆ ನಾವ್ಯಾರು ಕೇಳದೇ ಇದ್ದರೆ 400 ಕೋಟಿ ರೂಪಾಯಿಯನ್ನು ಸಂಪೂರ್ಣವಾಗಿ ಮುಗಿಸುತ್ತಿದ್ದರು. ಅಡಿಷನಲ್ ಚೀಫ್ ಸೆಕ್ರೆಟರಿಯವರು ಮಾನ್ಯ ಮುಖ್ಯಮಂತ್ರಿಗಳ ಕಂಟ್ರೋಲ್‌ಗೆ ಬರುವುದರಿಂದ ಇವರನ್ನು ಹೊರತುಪಡಿಸಿ ಲೋಕಾಯುಕ್ತಾ ತನಿಖೆಗೆ ವಹಿಸಿ. ಸಿಬಿಐ ಗೆ ನೀವು ಕೊಡುವುದಿಲ್ಲ. ಆದ್ದರಿಂದ, ಸಿಬಿಐಗೆ ಬೇಡ, ಲೋಕಾಯುಕ್ತರವರಿಗೆ ಕೊಡಿ. ಲೋಕಾಯುಕ್ತರವರ ಮೇಲೆ ನಿಮಗೆ ನಂಬಿಕೆ ಇಲ್ಲವೆ? ಇವರಿಂದ ತನಿಖೆ ಮಾಡಿಸಿ ಸತ್ಯ ಹೊರಕ್ಕೆ ಬರಲಿ. ಇದರಲ್ಲಿ ನಾವು ಬಾಗಿಯಾಗಿದ್ದೇವೆಂದು ಎಲ್ಲಿಯೋ ಒಂದು ಕಡೆ ನೀವು ಸಹ ಒಪ್ಪಿಕೊಂಡಿದ್ದೀರಿ. ಇದರ ಬಗ್ಗೆ ತನಿಖೆ ಮಾಡಲು ಬೇರೆಯವರಿಗೆ ಕೊಡುವುದಿಲ್ಲ, ಅಡಿಷನಲ್ ಚೀಫ್ ಸೆಕ್ರೆಟರಿಯವರ ಕಡೆಯಿಂದ ತನಿಖೆ ಮಾಡಿಸುತ್ತೇವೆಂದು ಹೇಳಿದ ಮೇಲೆ ಎಲ್ಲೋ ಒಂದು ಕಡೆ ಇದರಲ್ಲಿ ನಾವು ಕೂಡ ಭಾಗಿಯಾಗಿದ್ದೇವೆಂದು ತಾವು ಒಪ್ಪಿಕೊಂಡಂತೆ ಆಯಿತಲ್ಲವೇ? ಆದ್ದರಿಂದ, ಇದನ್ನು ಲೋಕಾಯುಕ್ತರವರ ಕಡೆಯಿಂದ ತನಿಖೆ ಮಾಡಿಸಲೇ ಬೇಕೆಂದು ನಾವು ಒತ್ತಾಯ ಮಾಡುತ್ತೇವೆ. ಸದನ ನಡೆಯಬೇಕೆಂದು ನಮಗೂ ಕೂಡ ಆಸೆ ಇದೆ. ನಮ್ಮ ಜನರು ಕಟ್ಟಿರುವ ತೆರಿಗೆಯ ಹಣವನ್ನು ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ವಿರೋಧಪಕ್ಷದ ಕರ್ತವ್ಯವಾಗಿರುತ್ತದೆ. ಆದ್ದರಿಂದ, ಇದನ್ನು ಕೂಡ ನಾವು ಒಂದು ಕಡೆ ಮಾಡಬೇಕಾಗುತ್ತದೆ. ಸದನ ನಡೆಯಬೇಕೆಂದು ಹೇಳುತ್ತಾ ಇವರು

ಏನು ಬೇಕಾದರು ಹಗರಣ ಮಾಡಿ ಅವ್ಯವಹಾರ ಮಾಡುವುದಕ್ಕಾಗಿ ಅವಕಾಶ ಕೊಡುವುದಕ್ಕೆ ವಿರೋಧಪಕ್ಷದವರು ತಯಾರಿಲ್ಲ. ಸದನ ನಡೆಸುವುದಕ್ಕೆ ಸಹಕಾರ ಕೊಡುತ್ತೇವೆ. ಆದರೆ, ಇದರ ಬಗ್ಗೆ ತನಿಖೆಯನ್ನು ಯಾವ ರೀತಿಯಾಗಿ ಮಾಡುತ್ತಾರೆಂಬುದನ್ನು ಅವರು ಹೇಳಬೇಕೆಂದು ತಮ್ಮ ಮುಖಾಂತರ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸೀಪುರ): ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಂಥ ಸಂದರ್ಭದಲ್ಲಿ interfere ಆಗಿ ಇದು ನನ್ನ ಗಮನಕ್ಕೆ ಬಂದಿಲ್ಲ ತಪ್ಪಾಗಿದೆ, ಇದರಲ್ಲಿ ಅನ್ಯಾಯ ನಡೆದಿದೆ ಎಂದು ಸದನದಲ್ಲಿ ಒಪ್ಪಿಕೊಂಡಿದ್ದಾರೆ. ಅವರು ಒಪ್ಪಿಕೊಂಡಾದ ಮೇಲೆ ಅಂದರೆ 2ನೇ ತಾರೀಖು ನನ್ನ ಗಮನಕ್ಕೆ ಬಂತು, ನಂತರ ಇದನ್ನು ತಡೆಹಿಡಿದಿದ್ದೇನೆ. ಇದರಲ್ಲಿ ಅವ್ಯವಹಾರವಾಗಿದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ" ಅಂಥ ಮಾನ್ಯ ಮುಖ್ಯಮಂತ್ರಿಗಳಿಗೆ ಅರಿವು ಆದ ಮೇಲೆ ಮಾನ್ಯ ವಸತಿ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಜುಲೈ 10ನೇ ತಾರೀಖು ಒಂದು ಹೇಳಿಕೆ ಮಾಡಿದ್ದಾರೆ. ನಾವು ತಮ್ಮ ಗಮನಕ್ಕೆ ಈಗಾಗಲೇ ಎಲ್ಲವನ್ನು ತಂದಿದ್ದೇವೆ. 955 ಎಕರೆ ಜಮೀನನ್ನು 50 ಲಕ್ಷ ರೂ.ಗಳಂತೆ ಎಕರೆಗೆ ಖರೀದಿ ಮಾಡುವುದಕ್ಕೆ 10ನೇ ತಾರೀಖಿನವರೆಗೆ ಇವರಿಗೆ ಒಪ್ಪಿಗೆ ಇತ್ತು ಎಂದು ಮಾನ್ಯ ವಸತಿ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತಂದಿದ್ದೇವೆ ಸ್ವಾಮಿ. ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳೆ ಇದು ತಪ್ಪಾಗಿದೆ ನಾನು ನಿಲ್ಲಿಸುವುದಕ್ಕೆ ಹೇಳಿದ್ದೇನೆ ಎಂದ ಮೇಲೆ ವಸತಿ ಮಂತ್ರಿಗಳು ಮೊನ್ನೆ ತಾನೇ ಪಾಪ ಹೊಸದಾಗಿ ಬಂದಿದ್ದಾರೆ, ಅವರಿಂದ ಯಾವ ರೀತಿಯಾಗಿ ಅಧಿಕಾರಿಗಳು ಹೇಳಿಕೆಯನ್ನು ಕೊಡಿಸಿದ್ದಾರೆನ್ನುವುದನ್ನು ನೀವು ನೋಡಬೇಕು. 995 ಎಕರೆ ಬಗ್ಗೆ ನಾವು ನಿಲುವಳಿ ಸೂಚನೆಯ ಮೇರೆಗೆ ತರದಿದ್ದರೆ ಇದು 400 ಕೋಟಿ ರೂ.ಗಳ ಗೋಲ್‌ಮಾಲ್ ಆಗುವುದು. ಕಾರ್ಯದರ್ಶಿಗಳು ಮತ್ತು ಹೌಸಿಂಗ್ ಬೋರ್ಡ್ ಕಮಿಷನರ್‌ರವರು ಬೋರ್ಡ್‌ನಲ್ಲಿ ಇರುತ್ತಾರೆ, ಇಂತಹ ಒಂದು 400 ಕೋಟಿ ರೂ.ಗಳ ಪ್ರಾಜೆಕ್ಟ್ ಬಗ್ಗೆ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಇದು ಸಚಿವ ಸಂಪುಟದ ಸಭೆಗೆ ಬರಬೇಕಾಗಿಲ್ಲ, ಫೈನಾನ್ಸ್ ಇಲಾಖೆಗೆ ಬರಬೇಕಾಗಿಲ್ಲ, ಹಾಗಾದರೆ ಹೌಸಿಂಗ್ ಬೋರ್ಡಿನವರು ಏನು

ಬೇಕಾದರೂ ಮಾಡಿ 400 ಕೋಟಿ ರೂ.ಗಳ ಲೂಠಿಯನ್ನು ಹೊಡೆಯಬಹುದೆ? ಮಾನ್ಯ ವಿರೋಧ ಪಕ್ಷದ ನಾಯಕರು CBI ತನಿಖೆಗೆ ಹೇಳಿದ್ದಾರೆ, ಏಕೆಂದರೆ, ಲೋಕಾಯುಕ್ತರ ಮೇಲೆ ಈ ಸರ್ಕಾರಕ್ಕೆ ನಂಬಿಕೆ ಇಲ್ಲ. ಒಂದು ಕಡೆ ಲೋಕಾಯುಕ್ತಕ್ಕೆ ಫ್ರೀ ಹ್ಯಾಂಡ್ ಕೊಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ಲೋಕಾಯುಕ್ತದ ಮೇಲೆ ನಂಬಿಕೆ ಇಲ್ಲವೆನ್ನುವ ರೀತಿಯಲ್ಲಿ ಹೇಳುತ್ತಾರೆ. ಬೇಡ ಇದನ್ನು CBI ತನಿಖೆ ಮಾಡುವುದಕ್ಕೆ ಹೇಳಿ. ಏಕೆಂದರೆ ನಮ್ಮ 50 ವರ್ಷದ ಒಂದು ಇತಿಹಾಸದಲ್ಲಿ ಇಂತಹ ಒಂದು scandal ನಡೆದಿದ್ದು ಇದು ಮೊದಲನೆಯದು ಎಂದು ಹೇಳಬೇಕಾಗುತ್ತದೆ. ನೀವು ಹೇಳುವಂತೆ, ಆ 20 ಸಾವಿರ ಎಕರೆ ಜಮೀನಿನ ಬಗ್ಗೆ ಬೇಕಾದರೆ ಚರ್ಚೆ ಮಾಡಿ, ನಿಮ್ಮವರೆ Industrial Minister ಇದ್ದಾರೆ. ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಸದಸ್ಯರಿಗೆ ಗಂಭೀರವಾಗಿ ಕುಳಿತುಕೊಳ್ಳುವುದಕ್ಕೆ ಹೇಳಿ. ಈ ರಾಜ್ಯದಲ್ಲಿ ವಿಧಾನಸಭೆ ಪ್ರಾರಂಭವಾದಾಗಿನಿಂದ ಇಂತಹ ಒಂದು scandal ಇದ್ದರೆ ಇದು ಮೊದಲನೆಯ scandal ಎಂದು ಹೇಳಬೇಕಾಗುತ್ತದೆ. ಈ ಸರ್ಕಾರ ಪಾರದರ್ಶಕತೆ ಇರುವ ಸರ್ಕಾರ ಎಂದು ಹೇಳುತ್ತಾರೆ ಸ್ವಾಮಿ. ಕರ್ನಾಟಕ ರಾಜ್ಯದ ಜನತೆಗೆ ಇವರು ಮೊದಲನೆಯ ವರ್ಷದ 400 ಕೋಟಿ ರೂ.ಗಳ ಒಂದು ಕೊಡುಗೆ ರೈತರಿಗೆ ಕೊಟ್ಟಿರುವಂಥದ್ದು. ರೈತರಿಗೆ 5 ಲಕ್ಷ ರೂ.ಗಳನ್ನು ಒಂದು ಎಕರೆಗೆ ಒಬ್ಬ ಮಂತ್ರಿಯ ಅಣ್ಣ ಕೊಡುತ್ತಾರೆ. ಯಾರು ಈ ಶ್ರೀನಿವಾಸ ಶೆಟ್ಟಿ GPA Holder ಮಾಡುತ್ತಾರೆ, 6.62 ಲಕ್ಷ ರೂ.ಗಳಿಗೆ 1.13 ಎಕರೆ ಜಮೀನು ರಿಜಿಸ್ಟ್ರೇಶನ್ ಮಾಡಿಸಿಕೊಳ್ಳುತ್ತಾರೆ. ಆ ಜಮೀನಿಗೆ ಒಂದೇ ವರ್ಷದಲ್ಲಿ 45 ಲಕ್ಷ ರೂ.ಗಳು. ರೈತರಿಗೆ 5 ಲಕ್ಷ ರೂ.ಗಳು ಮಾನ್ಯ ಮಂತ್ರಿಯ ಅಣ್ಣನಿಗೆ 45 ಲಕ್ಷ ರೂ.ಗಳು. ಅಂದರೆ 15 ಕೋಟಿ ರೂ.ಗಳಲ್ಲಿ ಮಾನ್ಯ ಮಂತ್ರಿಯ ಅಣ್ಣನಿಗೆ 13.50 ಕೋಟಿ ರೂ.ಗಳು. 31 ಎಕರೆ ಜಮೀನಿನಲ್ಲಿ ಒಂದುವರೆ ಕೋಟಿ ರೂ.ಗಳು ಮಾತ್ರ ರೈತನಿಗೆ ತಲುಪಿರುವುದು. ಇದರ ಬಗ್ಗೆ ನಾವು ಹೇಳದೆ ಹೋಗಿದ್ದರೆ ಹೇಗೆ? ಪಾಪ ನಮ್ಮ ಎಲ್ಲಾ ಮಾನ್ಯ ಸದಸ್ಯರುಗಳಿಗೆ ತಿರುಪತಿಯ ಲಾಡು ಕೊಟ್ಟು ಮೂರು ನಾಮ ಹಾಕಿದ್ದಾರೆ. "ಏಕೆಂದರೆ ನೀವು ತಿರುಪತಿಯ ಲಾಡು ತಿನ್ನಿ ನಾನು 13.50 ಕೋಟಿ ರೂ.ಗಳನ್ನು ತಿನ್ನುತ್ತೇನೆ." ಏನು ಸ್ವಾಮಿ? ಇದು ನ್ಯಾಯವೆ? ಮಾನ್ಯ ಮುಖ್ಯಮಂತ್ರಿಗಳೇ ಸಭೆಯಲ್ಲಿ ಒಪ್ಪಿಕೊಂಡ ಮೇಲೆ ಪದೇ ಪದೇ ಏನು ಚರ್ಚೆ, ಅಧಿಕಾರಿಗಳನ್ನು ಸಸ್ಪೆಂಡ್

ಮಾಡಿ, ರಾಜ್ಯಕ್ಕೆ ಒಂದು ಮೆಸೇಜ್ ಹೋಗಲಿ, ಕ್ಲೀನ್ ಆಗಿದೆ ಈ ಸರ್ಕಾರ ಎಂದು ಹೇಳಲಿ. ಈ 400 ಕೋಟಿ ರೂ.ಗಳ ಹಗರಣಕ್ಕೆ ಪೂರ್ತಿ ಸರ್ಕಾರದವರು ಹೊಣೆಗಾರರು. ಆಡಳಿತ ಪಕ್ಷದ ಸದಸ್ಯರಿಗೆ ನಾವು ಮಾತನಾಡುವಾಗ ಸುಮ್ಮನೆ ಇರುವುದಕ್ಕೆ ಹೇಳಿ. ಬೇರೆ ವಿಚಾರ ಏನಾದರೂ ಇದ್ದರೆ ಹೇಳಲಿ. ಎಲ್ಲಾ ನಮಗೆ ಗೊತ್ತಿದೆ, ಚರ್ಚೆ ಆಗಿದೆ.

ಶ್ರೀ ಸಿದ್ದು ಸವದಿ: ಇವರು ಹೇಳಿದ್ದನ್ನು ಒಪ್ಪಿಕೊಂಡು ತನಿಖೆಗೆ ಆದೇಶ ಮಾಡಿ ಎಂದು ಇವರು ಇಲ್ಲಿ ಹಠ ಹಿಡಿದುಕೊಂಡು ಕುಳಿತಿದ್ದಾರೆ. ಇವರಿಗೆ ನ್ಯಾಯಯುತವಾಗಿರುವುದು ಏನು ಬೇಕಾಗಿಲ್ಲ. ನಮಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಇನ್ನು ಯೀಲ್ಡ್ ಆಗಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಅಶೋಕ್‌ರವರಿಗೆ ಕೊಡುವುದಕ್ಕೆ ಹೇಳಿ

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಇವರ ಸದಸ್ಯರು ಎಲ್ಲರೂ ವೆಲ್‌ನಲ್ಲಿ ಇದ್ದು ಇವರು ಇಲ್ಲಿ ಏನು ಮಾತನಾಡುವುದು? ವೆಲ್‌ನಲ್ಲಿ ಅಥವಾ ಹೊರಗಡೆ ಯಾವುದಾದರೊಂದು ಜಾಗದಲ್ಲಿ ಅವರಿಗೆ ಇರುವುದಕ್ಕೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರು, ನನಗೆ ನೀವು ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ನಾನು ಹೊರಗಡೆಯಿಂದ ಮಾತನಾಡುತ್ತಿದ್ದೇನೆ.

ಶ್ರೀ ಆರ್. ಅಶೋಕ್: ನೀವು ಪ್ರತಿಭಟನೆ ಮಾಡುತ್ತಿದ್ದೀರಿ ತಾನೆ? ಸದಸ್ಯರು ವೆಲ್‌ನಲ್ಲಿ ಇರುವುದು ನೀವು ಹೊರಗಡೆ ಇರುವುದು. ಇದು ಹೇಗೆ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಪತ್ರಿಕೆ ಸಲುವಾಗಿ ಮಾತನಾಡುತ್ತಾರೋ ಈ ಸದನಕ್ಕೆ ಮಾತನಾಡುತ್ತಾರೋ? ನಿನ್ನೆ ಮಾತನಾಡಿರುವುದನ್ನೇ ಇವತ್ತು ಮಾತನಾಡುವುದು. Enquiry ಮಾಡಿಸುತ್ತೇವೆಂದು ಹೇಳಿದರು ಕೂಡ ಅದನ್ನೆ ಮಾತನಾಡುವುದು. ಇವರು ಯಾವಾಗ ಮಾನ್ಯ ಕೃಷ್ಣಯ್ಯ ಶೆಟ್ಟಿಯ ಅಣ್ಣನ ಹತ್ತಿರವೋ ತಮ್ಮನ ಹತ್ತಿರವೋ ಅಲ್ಲಿಗೆ ಹೋಗಿ ನೋಡಿ ಬಂದರು. 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳುತ್ತಾರೆ, ಕೊಡುವಾಗ ಇವರು ಏನು

ನೋಡುವುದಕ್ಕೆ ಹೋಗಿದ್ದರಾ? ಮತ್ತೆ ಇವರು CBIಗೆ ತನಿಖೆಗೆ ಕೊಡಿ ಎಂದು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಅಶೋಕರವರು ಮಾತನಾಡಲಿ, ಪ್ಲೀಸ್ ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ರೇವಣ್ಣನವರು ನಿಮಗೆ ಮಾತನಾಡುವುದಕ್ಕೆ ಕೊಡುತ್ತೇನೆ.

ಶ್ರೀ ಆರ್. ಅಶೋಕ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಇಲ್ಲಿ ಆ ಭಾಗದ ಶಾಸಕರು ಮತ್ತು ಶಿಡ್ಲಘಟ್ಟ ಶಾಸಕರು ಇದ್ದಾರೆ. ಮಾನ್ಯ ಮಾಗಡಿ ಬಾಲಕೃಷ್ಣರವರು ಈ ಭಾಗದ ಬೆಟ್ಟಗುಡ್ಡದಲ್ಲಿ ಇರುವುದು ಅವರು ಬಹಳ ದೂರ ಇರುವುದರಿಂದ ಅಲ್ಲಿಯ ರೇಟ್ ಏನು ಗೊತ್ತಿಲ್ಲ. ಮಾನ್ಯ ಶಿಡ್ಲಘಟ್ಟ ಶಾಸಕರು ಇರುವುದರಿಂದ ಅಲ್ಲಿ ಏನು ರೇಟ್ ಇದೆ ಕೇಳಿ. 2 ಲಕ್ಷ ರೂ.ಗಳ ರೇಟ್ ಇದೆ ಎಂದು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುವುದು. ಅಲ್ಲಿರುವ ಶಾಸಕರುಗಳು 40 ಲಕ್ಷ ರೂ.ಗಳಿಗೆ ಒಂದು ಎಕರೆಗೆ ರೇಟ್ ಇದೆ ಎಂದು ಹೇಳುತ್ತಾರೆ. ಅಂದರೆ ಇವರು ಎಲ್ಲೋ ಒಂದು ಕಡೆ ಹೇಳುತ್ತಾರೆ. ಇವರು ಮಾತ್ರ GPA ಮುಖಾಂತರ ರೈತರಿಗೆ ಹಣ ಕೊಡದೇ ಬ್ರೋಕರ್‌ಗಳ ಮುಖಾಂತರ ಹಣ ಕೊಟ್ಟರು ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಒಂದು ಆಕ್ಷೇಪಣೆಯನ್ನು ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಬಂದು ಅಪರ ಮುಖ್ಯ ಕಾರ್ಯದರ್ಶಿಗಳಿಂದ ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, GPA ಮುಖಾಂತರ ಇವರು ಕಳೆದ 20–25 ವರ್ಷದಿಂದ ಎಷ್ಟು ಜನ ರೈತರಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆನ್ನುವುದರ ಬಗ್ಗೆ ದಾಖಲೆ ಇದೆ. ಎಷ್ಟು ಜನ ರೈತರಿಗೆ ಹಣ ಕೊಡದೇ ಮಧ್ಯವರ್ತಿಗಳಿಗೆ ಕೊಟ್ಟಿದ್ದಾರೆ ಎಂಬ ಬಗ್ಗೆ ಎಲ್ಲಾ ದಾಖಲೆ ಇದೆ. ಸದನ ನಡೆಯಬೇಕು, ಪ್ರಶ್ನೋತ್ತರ ಇದೆ, ಸದನದ ಸಮಯವನ್ನು ಹಾಳು ಮಾಡುವುದು ಬೇಡ. ಬೇರೆ ಬೇರೆ ವಿಷಯಗಳ ಬಗ್ಗೆ ಚರ್ಚೆಯಾಗಬೇಕು.

ಕಾಂಗ್ರೆಸ್‌ದವರು ಇಷ್ಟು ವರ್ಷ ಏನು ಲೂಟಿ ಮಾಡಿದ್ದಾರೆ ಅದರ ಬಗ್ಗೆ ಕೂಡ ತನಿಖೆಯನ್ನು ಮಾಡಿಸಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಏನಾದರೊಂದು ಅರ್ಥ ಇದೆಯೇ? ಇದಕ್ಕೊಂದು ತೀರ್ಮಾನಕ್ಕೆ ಬರಬೇಕಾಗುತ್ತದೆ.

ಅಧ್ಯಕ್ಷರು: ಬೇರೆ ವಿಷಯದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಾವು ಇವತ್ತು ಬೆಳಗ್ಗೆ ಕೊಟ್ಟಿದ್ದೀರಿ. ಆ ವಿಷಯದ ಬಗ್ಗೆ ಚರ್ಚೆ ಮಾಡಬೇಕು. ಪ್ರಶ್ನೋತ್ತರ ಸಮಯ ಹಾಗೂ ಇನ್ನು ಬೇರೆ ವಿಷಯಗಳು ಇವೆ, ಅವೆಲ್ಲವೂ ವ್ಯರ್ಥವಾಗುತ್ತದೆ. ನಿನ್ನೆ ಬೆಳಗ್ಗೆಯಿಂದಲೂ ಈ ವಿಷಯವನ್ನು ಚರ್ಚೆ ಮಾಡಿದ್ದೇವೆ. ನೀವು ಎಲ್ಲಾ ವಿಷಯವನ್ನು ಹೇಳಿರುತ್ತೀರಿ. ನೀವು ಪ್ರಸ್ತಾಪ ಮಾಡಿರುವುದಕ್ಕೆ ಸರ್ಕಾರ ಉತ್ತರ ಕೊಟ್ಟಿದೆ. ಆ ಉತ್ತರ ಸರಿ ಇದೆಯೋ ಇಲ್ಲವೋ ಎನ್ನುವಂಥದ್ದನ್ನು ಅವರ ವಿವೇಚನೆಗೆ ಬಿಡುತ್ತೇನೆ. ಇದೇ ರೀತಿ ಉತ್ತರ ಕೊಡಬೇಕು, ಇದೇ ರೀತಿ ಆಗಬೇಕೆಂದು ಹೇಳುವುದಕ್ಕಾಗುವುದಿಲ್ಲ. ನಿಮ್ಮ ಪ್ರಯತ್ನ ನೀವು ಮಾಡಿದ್ದೀರಿ.. ನೀವು ವಿಷಯ ಮಂಡನೆ ಮಾಡಿ ನಿಮ್ಮ ಎಫರ್ಟ್ ನೀವು ಮಾಡಿದ್ದಿರಿ. ಹೀಗಾಗಿ ನಾವು ಇದನ್ನು ಎಲ್ಲಿಯವರೆಗೆ ತೆಗೆದುಕೊಂಡು ಹೋಗಬಹುದು. ಎಲ್ಲಾ ವಿಷಯಗಳು ಹೊರಗೆ ಬಂದಿವೆ. ಹೀಗಾಗಿ ಇದನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಸದನ ಈ ರೀತಿ dead lock ಆಯಿತು ಎಂದರೆ ಎಲ್ಲಾ ಉಳಿದ proceedingsಗೆ ತೊಂದರೆಯಾಗುತ್ತದೆ. ಸದನ ನಡೆಸುವುದಕ್ಕಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಸರ್ಕಾರವನ್ನು ಇದೇ ರೀತಿಯಾಗಿ ಉತ್ತರವನ್ನು ಕೊಡಿ ಎಂದು compulsion ಮಾಡುವುದಕ್ಕಾಗುವುದಿಲ್ಲ. ಆದರೆ ತಾವು ಕರೆದಾಗಲೆಲ್ಲಾ ನಾವು ಬಂದಿದ್ದೇವೆ. ನೀವು ಕೇಳಿದ್ದಕ್ಕೆಲ್ಲಾ ನಾವು ಸಹಕಾರವನ್ನು ಕೊಟ್ಟಿದ್ದೇವೆ. ನಮಗೆ ತಾವು question hour ತೆಗೆದುಕೊಳ್ಳಬೇಕು, ಬೇರೆ ಬಿಸಿನೆಸ್ ತೆಗೆದುಕೊಳ್ಳಬೇಕು ನಾವು ಒತ್ತಾಯವನ್ನು ಮಾಡುತ್ತಲೇ ಇದ್ದೇವೆ. ಆದರೆ ಇವತ್ತು ಇದು ಮುರಿದು ಬಿದ್ದಿರುವುದು ಸರ್ಕಾರದಿಂದ. ನಿನ್ನೆ ಅನೇಕ ವಿಚಾರಗಳನ್ನು ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿ ಯಾರ್ಯಾರು ಇದಕ್ಕೆ support ಆಗಿದ್ದಾರೆ ಎನ್ನತಕ್ಕಂತಹ ವಿಚಾರಗಳು ಬಂದಾಗ ಅದನ್ನು ಕಡತದಿಂದ ಕಿತ್ತುಹಾಕತಕ್ಕಂತಹ ಕೆಲಸವನ್ನು ಮಾಡಿದ್ದೇವೆ. ಆದರೆ ಇವತ್ತು ಸರ್ಕಾರವು

ಮೊಂಡುತನವನ್ನು ಮಾಡುತ್ತಿರುವುದನ್ನು ನೋಡಿದಾಗ ನಿನ್ನೆ ಏನೆಲ್ಲಾ ಕಡತದಿಂದ ಕಿತ್ತುಹಾಕಿದ್ದರೂ ಅದೆಲ್ಲವೂ ಸತ್ಯವೆಂದು ಹೇಳಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ಅವರು ಮತ್ತೇ ಹೊಸ ವಿಚಾರವನ್ನು ತರುತ್ತಿದ್ದಾರೆ ಇಲ್ಲಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಸದನವು ನಡೆಯಬೇಕು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಸಭಾಧ್ಯಕ್ಷರ ನಿರ್ಣಯವನ್ನು ಚಾಲೆಂಜ್ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಈ ವಿಚಾರವನ್ನು ನಾನು ಹೇಳುತ್ತಿದ್ದೇನೆ. ತಾವು ಕೂಡ ಸಚಿವರಾಗಿದ್ದೀರಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನೀವು walk out ಮಾಡಿರುವುದು. ಬಾವಿಗೆ ಬಿದ್ದಿರುವುದು ನೀವು. ನೀವು ಸರ್ಕಾರದ ಮೇಲೆ ಏನು ಹೇಳುತ್ತೀರಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಏಕೆ ಮಾತನಾಡುತ್ತೀರಿ?

ಶ್ರೀ ಬಸವರಾಜ ಬೊಮ್ಮಾಯಿ: ನೀವು ಮಾತನಾಡುವುದಕ್ಕೆ ಸಮಯವಲ್ಲ. ನೀವು ಬಾವಿಗೆ ಬಂದಿದ್ದೀರಿ. ಮತ್ತೇ ಏತಕ್ಕಾಗಿ ಸರ್ಕಾರದ ಹೆಸರನ್ನು ಹೇಳುತ್ತೀರಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: 6 ತಿಂಗಳೊಳಗಾಗಿ 500 ಕೋಟಿ ರೂಪಾಯಿಗಳ ಡೀಲ್ ಎನ್ನತಕ್ಕಂತಹ ಮಾತನ್ನು ಹೇಳುವುದಾದರೆ...

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನೀವು ಸದನಕ್ಕೆ ತಡೆಯನ್ನು ಮಾಡುತ್ತಿರುವವರು, ಬಾವಿಯೊಳಗೆ ಬಂದಿರುವವರು ನೀವು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಈ ಬಗ್ಗೆ ದಾಖಲಾತಿಗಳನ್ನು ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಏನೆಲ್ಲಾ ತಾವು ಪ್ರಸ್ತಾವನೆಯನ್ನು ಮಾಡಿದ್ದೀರಿ. ಅವೆಲ್ಲವನ್ನು enquiry ಮಾಡುತ್ತೇವೆಂದು ಹೇಳಿದ್ದೇವೆ. ಅದರ ಬಗ್ಗೆ enquiry ಆಗಿ ಸತ್ಯ ಹೊರಬರಲಿ. ಇದರಲ್ಲಿ ಯಾರನ್ನು ಕೈಬಿಡುವಂತಹ ಪ್ರಶ್ನೆಯೇ ಇಲ್ಲ. ಇದರ ಬಗ್ಗೆ ಸರ್ಕಾರವು ತೀರ್ಮಾನವನ್ನು ಮಾಡುತ್ತದೆ. ನೀವು ಹೇಳಿದ ಹಾಗೆ ನಾವು ತೀರ್ಮಾನವನ್ನು ಮಾಡುವುದಕ್ಕಾಗುವುದಿಲ್ಲ. ಈ ಕಡೆ ತಾವು ತಮ್ಮ ಪಕ್ಷದಲ್ಲಿ ಕುಳಿತಿದ್ದಾಗ ಎಂಥೆಂತಹ ಹಗರಣಗಳನ್ನು ಮುಚ್ಚಿಹಾಕಿದ್ದೀರೆಂದು ಅದು ನಮಗೆ ಗೊತ್ತಿದೆ. ಅವರು ಬಾವಿಯಲ್ಲಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಪ್ರತಿಪಕ್ಷದ ನಾಯಕರು, ಉಪನಾಯಕರು, ನಮ್ಮ ಇತರ ನಾಯಕರು ಅನೇಕ ವಿಚಾರಗಳನ್ನು ಮತ್ತೇ ಇವತ್ತು ಪ್ರತಿಪಾದಿಸಿದ್ದಾರೆ. ಈಗ ಒಂದು ವಿಚಾರವು ಸ್ಪಷ್ಟವಾಗಿದೆ. ನಿನ್ನೆ ಈ ವಿಚಾರವು ಪ್ರಸ್ತಾಪವಾದ ತಕ್ಷಣ ಸನ್ಮಾನ್ಯ ಮುಖ್ಯಮಂತ್ರಿಗಳು ಈಗಲೇ ಚರ್ಚೆಗೆ ಸಿದ್ಧ, ಚರ್ಚೆಯಾಗಲಿ, ಪೂರ್ಣ ವಿವರವನ್ನು ಕೊಡೋಣವೆಂದು ಹೇಳಿದರು. ಅದು ಆದಮೇಲೆ ಸರ್ಕಾರದಿಂದ ನಾವು ಸಮರ್ಪಕವಾದಂತಹ ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ: ಸಮರ್ಪಕವಾಗಿ ಎಲ್ಲಿ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ನಿಮ್ಮ ವಾದ ನಿಮ್ಮದು, ನಮ್ಮ ವಾದ ನಮ್ಮದು. ನಿಮಗೆ ಬೇಕಾದಂತಹ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ನಿಮಗೆ ಬೇಕಾದ ಉತ್ತರವನ್ನು ಕೊಡಬಹುದೇ?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ಉತ್ತರವನ್ನು ಕೊಟ್ಟಿದ್ದೇವೆ. ತಾವು ಎಲ್ಲಾ ಚರ್ಚೆಯನ್ನು ಕೇಳಿದ ಮೇಲೆ, ಎಲ್ಲರಿಗೂ clarificationಗೆ ಅವಕಾಶವನ್ನು ಕೊಟ್ಟ ಮೇಲೆ ಈ ವಿಷಯ ಇಲ್ಲಿ ಸಮಾಪ್ತಿಯಾಗಿದೆ ಎಂದು ಸಭೆಯನ್ನು ಮುಂದೂಡಿದ್ದಾರೆ. ಇವತ್ತು that is a closed chapter. ಅದಕೋಸ್ಕರ ನಾನು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ ಸದನದಲ್ಲಿ ಇತರ ವಿಚಾರಗಳನ್ನು ನಡೆಸುವುದಕ್ಕೆ ವಿರೋಧಪಕ್ಷದವರು ಅವಕಾಶವನ್ನು ಮಾಡಿಕೊಡಬೇಕು. ಬಾವಿಗೆ ಬಂದು ಬಾವಿಯಿಂದಲೂ ಮಾತನಾಡುತ್ತೇವೆ ಮತ್ತೆ ಆಚೆ ದಡಕ್ಕೂ ಹೋಗಿ ಮಾತನಾಡುತ್ತೇವೆ, ಅಂದರೆ ಇದು ಒಳ್ಳೆಯ ಲಕ್ಷಣವಲ್ಲ. ದಯವಿಟ್ಟು ಸದನದ ಕಲಾಪವನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಸ್ಯರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯವಿಟ್ಟು ಸಹಕಾರವನ್ನು ಕೊಡಿ. ಉಳಿದ proceedings ನಡೆಸೋಣ. ಸಾರ್ವಜನಿಕರು ಸದನದಲ್ಲಿ ಏನು ನಡೆಯುತ್ತಿದೆ ಎಂದು ನೋಡುತ್ತಿದ್ದಾರೆ. Public ನೋಡುತ್ತಿದ್ದಾರೆ. ಇದನ್ನು observe ಮಾಡುತ್ತಿದ್ದಾರೆ. ಅದಕ್ಕಾಗಿ ಬಹಳಷ್ಟು ವಿಷಯವನ್ನು ಚರ್ಚೆ ಮಾಡಬೇಕಾಗಿದೆ. ಕಾನೂನುಗಳನ್ನು ನಾವು ಇಲ್ಲಿ ಮಾಡಬೇಕಾಗಿದೆ. ಬಿಲ್‌ಗಳ ಬಗ್ಗೆ ಚರ್ಚೆಯನ್ನು ಮಾಡಬೇಕಾಗಿದೆ. ಪ್ರಶ್ನೋತ್ತರವು ಬಹಳ ಮಹತ್ವದ ಪ್ರಶ್ನೋತ್ತರದ ಅವಧಿಯೂ ಇವತ್ತು collapse ಆಗಿದೆ. ಇನ್ನು ಬಜೆಟ್ ಮೇಲೆ ಚರ್ಚೆಯು ಪ್ರಾರಂಭವಾಗಿಲ್ಲ.

ಇನ್ನು ಹಲವಾರು ವಿಷಯಗಳು ಇವೆ. ಇವತ್ತು ತಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ, Zero Hour ನಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೀರಿ. ಹೀಗಾಗಿ ತಾವು ದಯಮಾಡಿ ಸಹಕಾರವನ್ನು ಕೊಡಿ. ನಿಮ್ಮ ಸ್ಥಳಕ್ಕೆ ಹೋಗಿ. ನಾನು ನಿನ್ನೆ ಸಾಯಂಕಾಲವೇ ಹೇಳಿದ್ದೇನೆ. ಈ ವಿಷಯವನ್ನು ಮುಕ್ತಾಯಗೊಳಿಸಿದ್ದೇನೆಂದು ನಿನ್ನೆಯೇ ಹೇಳಿದ್ದೇನೆ. ಮತ್ತೇ ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡುವುದು ಬೇಡ. ದಯವಿಟ್ಟು ತಮ್ಮ ಸ್ಥಳಕ್ಕೆ ಹೋಗಿ ಉಳಿದ proceedings ನಡೆಸುವುದಕ್ಕೆ ದಯವಿಟ್ಟು ನೀವು ಸಹಕಾರವನ್ನು ಕೊಡಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯವಿಟ್ಟು ತಾವುಗಳು ತಮ್ಮ ಸ್ಥಳಕ್ಕೆ ಹೋಗಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಅನೇಕ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಏತಕ್ಕಾಗಿ ಹೇಳುತ್ತೇವೆಂದರೆ, ಒಂದು ಸಚಿವ ಸಂಪುಟಕ್ಕೆ ಒಂದು ನಿಯಮವಿದೆ. ನಾವು ಒಂದು ನಿಯಮದಡಿಯಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ನಾವು ಒಂದಲ್ಲ ಹತ್ತಾರು ಬಾರಿ ಆಕ್ಷೇಪವನ್ನು ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು: ಕೊನೆಯದಾಗಿ ಇನ್ನೊಂದು ಬಾರಿ ವಿನಂತಿಯನ್ನು ಮಾಡುತ್ತೇನೆ. ಪ್ರಶ್ನೋತ್ತರವನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು: ಕೊನೆಯದಾಗಿ ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ. ಪ್ರಶ್ನೋತ್ತರಕ್ಕೆ ಅವಕಾಶ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ: ನಮ್ಮ ಹತ್ತಿರ ದಾಖಲೆಗಳು ಇವೆ. ಏತಕ್ಕಾಗಿ ತಾವುಗಳು ಮಾತನಾಡುತ್ತೀರಿ. ಅದನ್ನು ಕೇಳುವ ನೈತಿಕ ಹಕ್ಕು ಇಲ್ಲ.

(ಗೊಂದಲ)

ಅಧ್ಯಕ್ಷರು: 4.30ಕ್ಕೆ ಸದನವನ್ನು ಮುಂದಕ್ಕೆ ಹಾಕುತ್ತಿದ್ದೇನೆ. ಮತ್ತೊಮ್ಮೆ ತಾವು ಎಲ್ಲಾ ವಿಚಾರವನ್ನು ಮಾಡುವುದಕ್ಕೆ ತಮ್ಮಗಳ ಸ್ಥಳಕ್ಕೆ ಹೋಗಿ. 4.30 ಗಂಟೆಗೆ ನಾನು ತಮಗೆ ಇನ್ನೊಂದು ಅವಕಾಶವನ್ನು ಕೊಟ್ಟಿದ್ದೇನೆ. ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ ತಾವು ಸಹಕಾರವನ್ನು ಕೊಡಿ, ಇಲ್ಲದಿದ್ದರೆ ಉಳಿದಿದ್ದು ನಿಮಗೆ ಬಿಟ್ಟಂತಹ ವಿಚಾರ. ಈಗ ಸದನವನ್ನು 4.30 ಗಂಟೆಗೆ ಮುಂದಕ್ಕೆ ಹಾಕಿದ್ದೇನೆ.

(ಗೊಂದಲ)

(ಸದನವು 3.45 ಗಂಟೆಗೆ ಮುಕ್ತಾಯವಾಗಿ ಪುನ: 4.30 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)

ಸದನವು ಪುನಃ ಸಾಯಂಕಾಲ 4 ಗಂಟೆ 48 ನಿಮಿಷಕ್ಕೆ ಸಮಾವೇಶಗೊಂಡಿತು.

ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.ಎಸ್ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಅಧ್ಯಕ್ಷರು: ವೆಲ್‌ನಲ್ಲಿ ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ವಿ. ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಎಲ್ಲವೂ ವಿವರವಾಗಿ ಚರ್ಚೆಯಾಗಿದೆ. ಮಾನ್ಯ ಸದಸ್ಯರು ಈಗಾಗಲೇ ಇದರ ಬಗ್ಗೆ ಎಷ್ಟು ಬೆಳಕು ಚೆಲ್ಲಬೇಕೋ ಚೆಲ್ಲಿದ್ದಾರೆ. ಸರ್ಕಾರವೂ ಕೂಡ ಅದಕ್ಕೆ ತೀಕ್ಷ್ಣವಾದ ಉತ್ತರವನ್ನು ತೆಗೆದುಕೊಂಡು ಅದರ ಸತ್ಯಾಸತ್ಯೆಗಳನ್ನು ಪರಾಮರ್ಶೆ ಮಾಡುವುದಕ್ಕೋಸ್ಕರವಾಗಿ ಸನ್ಮಾನ್ಯ ಸಭಾನಾಯಕರು ಈಗಾಗಲೇ ಅದಕ್ಕೆ Additional Chief Secretary ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ದಯಮಾಡಿ ಇವತ್ತು ಏನು ಉದ್ದೇಶ ಪೂರ್ವಕವಾಗಿ ಆಗಿರುವಂಥ ಒಂದು ಸಣ್ಣ ವಿಚಾರವನ್ನು ಎಲ್ಲೋ ಒಂದು ಕಡೆ ಅದಕ್ಕೆ ಧಿಕ್ಕಾರವನ್ನು ಕೊಡುವಂಥಾದ್ದು ಸಹಜವಾದಂತಹ

ಕ್ರಮವಲ್ಲ. ತಾವು ತೀರ್ಮಾನವನ್ನು ಕೊಟ್ಟಿದ್ದೀರಿ. ಮುಕ್ತಾಯವಾಗಿದೆ. ಸಭೆ ನಡೆಯುವುದಕ್ಕೆ ತಾವು ಅನುವು ಮಾಡಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನಿನ್ನೆಯೇ ಮುಗಿದಿದೆ. ಮುಗಿದಿರುವಂಥ ಅಧ್ಯಾಯವನ್ನು ಪದೇ ಪದೇ ಪ್ರಸ್ತಾಪ ಮಾಡಿ ಕಾಲಹರಣ ಮಾಡುವಂಥಾದ್ದು ಆಗಲಿ, ಬೇರೆ ವಿಚಾರಗಳಿಗೆ ಅವಕಾಶ ಕೊಡದೇ ಇರುವುದು ಸರಿಯಲ್ಲ. 31 ಎಕರೆ ಏನು ಈಗಾಗಲೇ ಖರೀದಿ ಆಗಿದೆ, 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದನ್ನ ಅಲ್ಲಿಯೇ ಸ್ಥಗಿತಗೊಳಿಸಿದ್ದೇವೆ. ಅದರ ಜೊತೆಯಲ್ಲಿ ಇವತ್ತು Additional Chief Secretary ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ದಯಮಾಡಿ ಬೇರೆ ವಿಚಾರಗಳಿಗೆ ಹೋಗಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್: ಏನು 31 ಎಕರೆಗೆ ನಿಲ್ಲಿಸಿದ್ದೇವೆಂದು ಹೇಳುತ್ತಿದ್ದಾರೆ, ಅಲ್ಲೇ ಅಪರಾಧಿ ಸಿಕ್ಕಿದ್ದಾರೆ. 900 ಎಕರೆ ತೆಗೆದುಕೊಂಡು 30 ಎಕರೆಗೆ ನಿಲ್ಲಿಸಿದ್ದಾರೆಂದರೆ, ಅವರು ಅಲ್ಲೇ ಅಪರಾಧಿ.

(ಗೊಂದಲ)

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು): ಮಾನ್ಯ ಸಭಾಧ್ಯಕ್ಷರೆ, ನೀವು close ಎಂದು ಹೇಳಿದ್ದೀರಿ, ಆ subject close ಆಗಿದೆ. ಮತ್ತೆ ಚರ್ಚೆಗೆ ಅವಕಾಶ ಕೊಟ್ಟರೆ ಹೊಸ precedent ಅನ್ನು ಮಾಡಿದಂತಾಗುತ್ತದೆ. ಸಭೆಯ ನಿಯಾಮವಳಿಗೆ ವಿರುದ್ಧವಾಗುತ್ತದೆ. ಇವರಿಗೆ ಸದನ ನಡೆಯುವುದು ಬೇಕಾಗಿಲ್ಲ. Question hour ಬೇಕಾಗಿಲ್ಲ. ಸದನ ಕಾಲಹರಣ ಮಾಡುತ್ತಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ತನಿಖೆ ಮಾಡಿಸಲಾಗುವುದು ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್.ಅಶೋಕ್: ಈಗ ಆ ಗೋವಿಂದ ಎಲ್ಲಾ ಕಾಂಗ್ರೆಸ್‌ಗೆ ಆಗಿಹೋಗಿಬಿಟ್ಟಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಗೋವಿಂದ ಆಗಿಹೋಗಿಬಿಟ್ಟಿದೆ. ಆದುದರಿಂದ ಗೋವಿಂದ ಆಗಬೇಕಾಗಿರುವವರು ನಮ್ಮ ಬಗ್ಗೆ ಮಾತನಾಡುವುದು ಬೇಡ. ಇದು ಮುಗಿದ ಅಧ್ಯಾಯ. ತಾವು ರೂಲಿಂಗ್

ಕೊಟ್ಟಿದ್ದೀರಿ. ಮತ್ತೆ ಪ್ರಾರಂಭ ಮಾಡಿದರೆ ಇದು ಹೊಸ ನಿಯಮವಾಗುತ್ತದೆ. ದಯವಿಟ್ಟು ಕಾಲಹರಣ ಮಾಡುವುದಕ್ಕೆ ಅವಕಾಶ ಕೊಡದೇ ಸದನ ನಡೆಯುವುದಕ್ಕೆ ಅವಕಾಶ ಕೊಡಬೇಕೆಂದು ನಿಮ್ಮ ಮುಖಾಂತರ ವಿರೋಧಪಕ್ಷದ ಎಲ್ಲಾ ಸದಸ್ಯರಿಗೆ ಮನವಿ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಮಾನ್ಯ ಸದಸ್ಯರು ತಮ್ಮ ಸ್ಥಳಕ್ಕೆ ಹೋಗಿ. ಇದೇನು dead lock ಆಗಿದೆ ಇದನ್ನು clear ಮಾಡಿ ಈಗ question hour ತೆಗೆದುಕೊಳ್ಳೋಣ. ನಿಮ್ಮದೆಲ್ಲಾ questions ಇವೆ. ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ. ಈ ವಿಷಯವನ್ನು ಎಲ್ಲಿಯವರೆಗೆ ಎಳೆಯಬೇಕೋ ಅಲ್ಲಿಯವರೆಗೆ ಎಳೆದಿದ್ದೀರಿ. ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸಾರ್ವಜನಿಕರಿಗೆ ಏನು message ಹೋಗಬೇಕೋ ಹೋಗಿದೆ. ಎಲ್ಲಾ ವಿಷಯ ಇವತ್ತು ಬಂದಿದೆ. ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಸರ್ಕಾರ ತನ್ನ ನಿಲುವೇನು ಎಂಬುದನ್ನು ಹೇಳಿದೆ. ನೀವು ನಿಮ್ಮ ನಿಲುವುವನ್ನು ಹೇಳಿದ್ದೀರಿ. ಏನು ವಿಷಯ ಪ್ರಸ್ತಾಪ ಮಾಡಬೇಕಾಗಿತ್ತೋ ಅದನ್ನು ಮಾಡಿದ್ದೀರಿ. ಎಲ್ಲವೂ ಈಗ ಮುಗಿದು ಹೋಗಿರುವ ಅಧ್ಯಾಯ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ರೈತರಿಗೆ ಎಲ್ಲರೂ ಅನುಕೂಲ ಮಾಡಿಕೊಡಿ. ದಯಮಾಡಿ ತಾವು ಅದನ್ನು ಒಪ್ಪಿಕೊಂಡು ಇದ್ಯಾವುದೋ ಸಣ್ಣ ವಿಷಯಕ್ಕೋಸ್ಕರ ಬಾವಿಯಲ್ಲಿ ಬಿದ್ದು, ಜನ ತೀರ್ಮಾನ ಮಾಡಿ ಬಾವಿಗೆ ಬೀಳಿಸಿಬಿಟ್ಟಿದ್ದಾರೆ. ಆದುದರಿಂದ ದಯಮಾಡಿ ಅವರಿಗೆ ರೂಲಿಂಗ್ ಕೊಟ್ಟಿದ್ದೀರಿ. ಆದ್ದರಿಂದ ಮತ್ತೆ ರೂಲಿಂಗ್ ಪಾಸ್ ಮಾಡಲಿಕ್ಕೆ ಹೋಗಬೇಡಿ ಅಧ್ಯಕ್ಷರೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ,

ಅಧ್ಯಕ್ಷರು: ಮಾನ್ಯ ರೇವಣ್ಣನವರೇನೋ ಹೇಳುತ್ತಾರಂತೆ ಒಂದು ನಿಮಿಷ ಸುಮ್ಮನಿರಿ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ತಮ್ಮ ಸ್ಥಳಕ್ಕೆ ಹೋಗಿ, ಉಳಿದ proceedings ನಡೆಸಲು ಅವಕಾಶ ಕೊಡಿ, ಇದು ನನ್ನ ಕೊನೆಯ request ಆಗಿದೆ. ನಿಮಗೆ ಸದನ ನಡೆಸುವುದು ಬೇಡವೆಂದರೆ ಬಿಟ್ಟುಬಿಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ವಸತಿ ಸಚಿವರಲ್ಲಿ ಕೇಳುತ್ತಿದ್ದೇನೆ. Additional Chief Secretary ಯವರು..

ಅಧ್ಯಕ್ಷರು: ಇನ್ನೂ Question hour ಆಗಿಲ್ಲ. ಬಜೆಟ್ ಬಗ್ಗೆ ಚರ್ಚೆ ಪ್ರಾರಂಭವಾಗಿಲ್ಲ. ಬಿಲ್ ಒಂದೂ ಪಾಸ್ ಆಗಿಲ್ಲ. ಬೇರೆ ಬೇರೆ ವಿಷಯಗಳಿವೆ. ಚರ್ಚೆಯಾಗಬೇಕಾಗಿರುವ ಸಾಕಷ್ಟು ವಿಷಯಗಳಿವೆ. ಕೇವಲ ಇದೊಂದೇ ವಿಷಯವಲ್ಲ, ಇನ್ನೂ ಸಾಕಷ್ಟು ವಿಚಾರಗಳನ್ನು ನೀವು ಚರ್ಚೆ ಮಾಡಲಿಕ್ಕೆ ಅವಕಾಶವಿದೆ. ಒಂದು ವಿಷಯದ ಬಗ್ಗೆ ನೀವು ಚರ್ಚೆ ಮಾಡಿದ್ದೀರಿ. ನಿನ್ನೆ ಬೆಳಗ್ಗೆ question hour ಆದ ಮೇಲೆ ಸಾಯಂಕಾಲದವರೆಗೂ discussion ಆಗಿದೆ. ಮತ್ತೆ ಅದನ್ನೇ ಪದೇ ಪದೇ ಹೇಳುವಂಥಾದ್ದಲ್ಲ. ಸರ್ಕಾರದ ತನ್ನ ನಿಲುವೇನು ಎನ್ನುವುದನ್ನು ಹೇಳಿದೆ. ಎಲ್ಲಿಯವರೆಗೂ ಇದನ್ನು ನಾನು ಕೇಳಿಕೊಂಡು ಹೋಗುವುದು? ಅಂತಿಮವಾಗಿ ಏನಾದರೂ ನಿರ್ಣಯ ಕೈಗೊಳ್ಳಬೇಕಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ವಸತಿ ಮಂತ್ರಿಗಳು ಮತ್ತು ಕಾನೂನು ಮಂತ್ರಿಗಳನ್ನು ಕೇಳುವುದು ಇಷ್ಟೇ. ಈಗ ಮಾನ್ಯ ಕೃಷ್ಣಯ್ಯಶೆಟ್ಟಿಯವರಿಗೆ ಕ್ಯಾಬಿನೆಟ್ ರ್ಯಾಂಕ್ ಕೊಟ್ಟು, Chairman ಮಾಡಿದ್ದೀರಿ. ಜೊತೆಗೆ ಅವರು ಈ ಹಿಂದೆ ಸಚಿವರಾಗಿದ್ದವರು. ಅವರ ಮೇಲೆ Additional chief Secretary enquiry ಮಾಡುವುದಕ್ಕೆ ಆಗುವುದೇ ಎನ್ನುವುದನ್ನು ದಯಮಾಡಿ ಸದನಕ್ಕೆ ಹೇಳಲಿ. ಒಬ್ಬ ಕ್ಯಾಬಿನೆಟ್ ಸಚಿವರ ಬಗ್ಗೆ ನೀವು Additional Chief Secretary ಯಿಂದ ತನಿಖೆ ಮಾಡಿಸುತ್ತೇವೆಂದರೆ ಹೇಗೆ? ಇವತ್ತು ಕೃಷ್ಣಯ್ಯಶೆಟ್ಟಿ ಅವರಿಗೆ ಕ್ಯಾಬಿನೆಟ್ ರ್ಯಾಂಕ್ ಕೊಟ್ಟು ಎರಡು

ಬೋರ್ಡ್‌ಗಳನ್ನು ವಹಿಸಿದ್ದಾರೆ. ಒಬ್ಬ Additional Chief Secretary ಕ್ಯಾಬಿನೆಟ್ ರ್ಯಾಂಕಿನ minister ಮೇಲೆ enquiry ಮಾಡುವುದಕ್ಕಾಗುತ್ತದೆಯೇ? ಸ್ವಂತ ಅವರ ಅಣ್ಣ. ಇದನ್ನು ತನಿಖೆ ಮಾಡುವುದಕ್ಕೆ ಆಗುತ್ತದೆಯೇ? ಸರ್ಕಾರಕ್ಕೆ ನೈತಿಕ ಹಕ್ಕಿದ್ದರೆ, ಇದರಲ್ಲಿ ಮುಖ್ಯಮಂತ್ರಿಗಳೇ involve ಆಗಿದ್ದಾರೆ ಎಂದು ಹೇಳಬೇಕಾಗುತ್ತದೆ. ನಾವು ಕೇಳುತ್ತಿರುವುದು CBI enquiry ಮಾಡಿಸಿ ಎನ್ನುವುದು ಅಥವಾ ಲೋಕಾಯುಕ್ತಕ್ಕೆ ಕೊಡಿ. ಎರಡರಲ್ಲಿ ಒಂದಕ್ಕೆ ಇವರಿಗೆ ಕೊಡುವುದಕ್ಕಾಗುವುದಿಲ್ಲವೆಂದರೆ ಮಾನ್ಯ ಕೃಷ್ಣಯ್ಯಶೆಟ್ಟರ ಜೊತೆ ಈ ಸರ್ಕಾರವೂ ಭಾಗಿಯಾಗಿದೆ ಎನ್ನುವುದನ್ನು ಹೇಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಸಭಾಧ್ಯಕ್ಷರೆ, ಬೆಳಗ್ಗೆಯಿಂದಲೂ ಕೂಡ ಇಷ್ಟೊಂದು ಜನ ಧರಣಿಯಲ್ಲಿ ಕುಳಿತುಕೊಂಡಿದ್ದಾರೆ. ತಮ್ಮ ಕಛೇರಿಗೆ ಬಂದು 3 ಸಾರಿ ಅಲ್ಲ, 4 ಸಾರಿ ಮಾತುಕತೆಯಾಯಿತು. ನಾವೆಲ್ಲಾ ರೀತಿಯಲ್ಲಿಯೂ ಸಹಕಾರ ಕೊಡಬೇಕು, ಸಭೆ ನಡೆಯಬೇಕು, question hour ಆಗಬೇಕು, adjournment motion ತೆಗೆದುಕೊಳ್ಳಬೇಕೆಂದು ನಾವು ಹೇಳುತ್ತಲೇ ಇದ್ದೇವೆ. ಆದರೆ, ಬೆಳಗ್ಗೆಯಿಂದಲೂ ನಾವು ಕೊಟ್ಟಿರುವಂಥ ಯಾವುದೇ ಸಲಹೆಗಳನ್ನು ಒಪ್ಪದೇ, ಮಾನ್ಯ ಮುಖ್ಯಮಂತ್ರಿಗಳೂ ಸಹಾ ಸಭೆಗೆ ಬರಲಿಲ್ಲವೆಂದರೆ, ನಾವು ಏನು ಹೇಳಬೇಕು? ದಯಮಾಡಿ ನಾನು ಹೇಳುವುದೇನೆಂದರೆ, ತಮಗೆ ಅಧಿಕಾರವಿದೆ. ತಾವು ಸ್ವಲ್ಪ ಮಧ್ಯಪ್ರವೇಶ ಮಾಡಿ ಸರ್ಕಾರಕ್ಕೆ ಬುದ್ಧಿ ಹೇಳುವಂತಹ ಕೆಲಸವನ್ನಾದರೂ ಮಾಡಿ. ಆಗಲಾದರೂ ಕೂಡ ಏನಾದರೂ ಬದಲಾವಣೆ ಆಗುತ್ತಾರೋ ಏನೋ? ದಯವಿಟ್ಟು ನಮ್ಮ ಕಡೆ ಸಹಕರಿಸಬೇಕು. ಏಕೆಂದರೆ, ಸಭೆಯನ್ನು ನಡೆಸಬೇಕು. ಪತ್ರಿಕೆಗಳಲ್ಲಿ ನಾಳೆ ಏನು ಬರುತ್ತದೆ?

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ): ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಜಯಚಂದ್ರರವರು ನಾವು ಪೂರ್ತಿ ಸಹಕಾರವನ್ನು ಕೊಡಲು ಸಿದ್ಧರಿದ್ದೇವೆಂದು ಹೇಳಿದರು. ಇದು ಹೇಗಿದೆ ಎಂದರೆ, ನಾನು ಹೇಳಿದ ಹಾಗೆಯೇ ನೀವು ಮಾಡಬೇಕು, ಮಾಡಿದರೆ ಸಹಕಾರ ಕೊಡುತ್ತೇವೆ ಎಂಬಂತಿದೆ. ಅದು ಹೇಗೆ ಆಗುತ್ತದೆ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನಾವು ಹೇಳಿದ ಹಾಗೆ ಅಲ್ಲ. ಇಷ್ಟೆಲ್ಲಾ ಆರೋಪ ಮಾಡಿದ್ದೇವೆ. ನಾವು point out ಮಾಡಿಕೊಂಡಿರುವ ಸುಮಾರು 25 ಆರೋಪಗಳನ್ನು ಮಾಡಿದ್ದೇವೆ. Proceduresನಲ್ಲಿ ಇವತ್ತಿನ ನಿಮ್ಮ ನಡವಳಿಕೆಯಲ್ಲಿ ತಪ್ಪಿದೆ. ಈ ರೀತಿ ನೀವು ಎಲ್ಲಾ ರೀತಿಯಲ್ಲೂ ತಪ್ಪುಗಳನ್ನು ಮಾಡಿದರೂ ಕೂಡ ಯಾವುದೊಂದನ್ನು ಮಾಡುತ್ತಿಲ್ಲ. ಮಾನ್ಯ ಸೋಮಣ್ಣನವರು ನೆಟ್ಟಗೆ ಬಂದು ಆಗುವುದಿಲ್ಲವೆಂದು ಒಂದೆರಡು ಮಾತುಗಳನ್ನು ಹೇಳಿಬಿಟ್ಟರು. ಇದೆಯೇ ಸರ್ಕಾರದ ಉತ್ತರ? ಇಂಥ ಮಹತ್ವವಾದ ವಿಚಾರ ಪ್ರಸ್ತಾಪವಾದಾಗ ಸರ್ಕಾರ ಉತ್ತರ ಕೊಡತಕ್ಕದ್ದು ಇದೆಯೇ? ಮಾನ್ಯ ರೇವಣ್ಣನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಸರ್ಕಾರ ಎಂದರೆ ಒಂದು ನೀತಿ ನಿಯಮ ಇದೆ. ಆ ನಿಯಮ ಗೊತ್ತಿಲ್ಲದಿರತಕ್ಕವರು ನೀವು.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೇ, ಈ ಒಂದು ವಿಚಾರವನ್ನು ಮುಕ್ತಾಯ ಮಾಡಿದ್ದೇನೆಂದು ತಾವು ಹೇಳಿದ್ದೀರಿ. ನಿನ್ನೆ ಜಯಚಂದ್ರ ಸಾಹೇಬರು ಇದ್ದು ಮಾತನಾಡಬೇಕಾಗಿತ್ತು. ದಯಮಾಡಿ ಈ ವಿಚಾರ ಮುಗಿದಿದೆ. ಬೇಕಾದರೆ ಇನ್ನೊಂದು ರೂಪದಲ್ಲಿ ಅವರು ತೆಗೆದುಕೊಳ್ಳಲಿ. ನಾವು ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟಿದ್ದೇವೆ.

(ಗೊಂದಲ)

ಅಧ್ಯಕ್ಷರು: ತಾವು ಪ್ರಶ್ನೋತ್ತರವನ್ನು ಪ್ರಾರಂಭ ಮಾಡಿ. ಬೇಡವೆಂದರೆ ಉಳಿದಿರುವ ಪ್ರೊಸೀಡಿಂಗ್ಸ್ stop. ಬೇರೆ ಪ್ರೊಸೀಡಿಂಗ್ಸ್ ಯಾವುದೂ ನಡೆಯುವುದಿಲ್ಲ. ಸಹಕಾರ ಕೊಡಿ.

ಶ್ರೀ ವಿ. ಸೋಮಣ್ಣ: ದಯಮಾಡಿ ಇದೇ ವಿಚಾರದ ಬಗ್ಗೆ ಪದೇ ಪದೇ ಪ್ರಸ್ತಾಪ ಮಾಡಿ ಕಾಲಹರಣ ಮಾಡತಕ್ಕದ್ದು ಸಮಂಜಸವಲ್ಲ. ಇಲ್ಲಿ ಇರುವುದು ಮತ್ತೆ ಅಲ್ಲಿ ಹೋಗಿ ಮಾತನಾಡುವುದು.

(ಗೊಂದಲ)

ಅಧ್ಯಕ್ಷರು: ತಾವು ಸಹಕಾರ ಕೊಡದಿದ್ದರೆ ಬೇರೆ ದಾರಿ ಇಲ್ಲದೆಯೇ ಸಭೆಯನ್ನು ಮುಂದಕ್ಕೆ ಹಾಕಬೇಕಾಗುತ್ತದೆ.

(ಗೊಂದಲ)

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೇ, ತಾವೇ ನಿನ್ನೆ ಈ ವಿಷಯವನ್ನು ಮುಕ್ತಾಯ ಮಾಡುತ್ತೇನೆಂದು ಮೂರು ಸಲ ಹೇಳಿದ್ದೀರಿ.

(ಗೊಂದಲ)

ಶ್ರೀ ವಿ. ಸೋಮಣ್ಣ: ಸರ್ಕಾರ ಪಾರದರ್ಶಕವಾಗಿದೆ. ಮುಚ್ಚಿಡತಕ್ಕ ಪರಿಸ್ಥಿತಿಯಲ್ಲಿ ಈ ಸರ್ಕಾರ ಇಲ್ಲ. 31 ಎಕರೆ ತೆಗೆದುಕೊಂಡು 15 ಕೋಟಿ ಕೊಟ್ಟಿದ್ದೇವೆ. ಅದರ ಬಗ್ಗೆ enquiry ಆದರೆ ಆಗಲಿ.

(ಗೊಂದಲ)

ಅಧ್ಯಕ್ಷರು: ಈ ವಿಷಯ ಮುಕ್ತಾಯವಾಗಿದೆ. ಇದನ್ನು ಇನ್ನು ಹೆಚ್ಚು ಬೆಳೆಸುವುದಕ್ಕೆ ಹೋಗಬೇಡಿ. ದಯವಿಟ್ಟು ಸಹಕಾರ ಕೊಡಿಯೆಂದು ಹೇಳುತ್ತಿದ್ದೇನೆ. ನೀವು ಅದನ್ನು ಕೇಳುತ್ತಿಲ್ಲವೆಂದರೆ ಈ ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಗೆ ಸೇರುವಂತೆ ಮುಂದಕ್ಕೆ ಹಾಕಿದ್ದೇನೆ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11–00 ಗಂಟೆಗೆ ಸೇರುವುದು.

(ಸದನವು ಸಂಜೆ 4 ಗಂಟೆ 58 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 16ನೇ ಜುಲೈ 2009ರ ಗುರುವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಃಶ್ಚಯಿಸಿತು)